ಐಕ್ಯರಂಗ


ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 10 ಮಾರ್ಚಿ 7, 1982 ಬೆಲೆ 60 ಪೈಸೆ

ಪುಸ್ತಕ ಬಿಡುಗಡೆ

ದಿವಂಗತ ಕಾಂ|| ಎ. ಕೆ. ಜಿ. ಯವರ ಆತ್ಮ ಚರಿತ್ರೆಯ ಕನ್ನಡ ಅನುವಾದ 'ನನ್ನ ಜೀವನದ ಕಥೆ' (ಅನು : ಬಿ. ಮಾಧವ ; ಭಾರತೀ ಪ್ರಕಾಶನ ಮೈಸೂರು) ಪುಸ್ತಕವು ದಿ. ಕಾಂ|| ಎ. ಕೆ. ಜಿ. ಯವರ ವರ್ಧಂತಿಯ ದಿನವಾದ ಮಾರ್ಚ್ 22ರಂದು ಮೈಸೂರು, ಬೆಂಗಳೂರು ಮಂಗಳೂರು ಮತ್ತು ಧಾರವಾಡಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ದೇಶದ ಮಹಾನ್ ಕ್ರಾಂತಿಕಾರಿ ದಿ|| ಎ. ಕೆ. ಜಿ. ಯವರ ಜೀವನಾನುಭವವನ್ನೊಳಗೊಂಡ ಈ ಪುಸ್ತಕವನ್ನು ಕೊಂಡುಕೊಳ್ಳಬೇಕಾಗಿ ತನ್ನ ಓದುಗರನ್ನು ಐಕ್ಯರಂಗ ವಿನಂತಿಸುತ್ತದೆ.



ಕಾಂ| ಎ. ಕೆ. ಗೋಪಾಲನ್

ಮಹಾರಾಷ್ಟ್ರ ಗಲಭೆಗಳ ಹಿಂದಿನ ಕೈವಾಡ ಯಾರದು ?

ಫೆಬ್ರವರಿ 14 ರಿಂದ ಪುಣೆ (Poona) ಸೋಲಾಪುರ, ಬಾರಾಮತಿ ಮತ್ತು ಪಂಢರಾಪುರ ಮತ್ತಿತರ ದಕ್ಷಿಣ ಮಹಾರಾಷ್ಟ್ರದ ನಗರಗಳು ಕೋಮು ಗಲಭೆಗಳಿಗೆ ಈಡಾಗಿವೆ. ಗಲಭೆಗಳು ಮೇಲ್ನೋಟಕ್ಕೆ ತಣ್ಣಗಾಗಿರುವದಾಗಿ ಕಂಡು ಬಂದರೂ, ಬಿಸಿ ಇನ್ನೂ ತಗ್ಗಿಲ್ಲ.

ಈ ಅಮಾನುಷ ಗಲಭೆಗಳಲ್ಲಿ ನೂರಾರು ಅಮಾಯಕರು ತೊಂದರೆಗೊಳಗಾಗಿದ್ದು ಕನಿಷ್ಠ 29 ಲಕ್ಷ ರೂ.-ಗಳ ಆಸ್ತಿ-ಪಾಸ್ತಿ ನಷ್ಟ ಉಂಟಾಗಿರುವ ವರದಿಯಾಗಿದೆ.

ಈ ಗಲಭೆಗಳು ಆಕಸ್ಮಾತ್ತಾಗಿ ನಡೆದದ್ದೇನೂ ಅಲ್ಲ. ಪೂರ್ವಯೋಜಿತ ಎಂಬುದು ಸುಸ್ಪಷ್ಟ. ಮಹಾರಾಷ್ಟ್ರದ ಈ ನಗರಗಳಲ್ಲಿ ವಿಶ್ವ ಹಿಂದೂ ಪರಿಷತ್, ಹಿಂದೂ ಏಕತಾ ಆಂದೋಲನ, ಹಿಂದೂ ಸೇನಾ ಮತ್ತು ಮರಾಠಾ ಮಹಾ ಸಂಘ ಮೊದಲಾದ ಕೋಮುವಾದಿ ಸಂಸ್ಥೆಗಳು ವರ್ಧಿಸಿವೆ. ಈ ಸಂಘಟನೆಗಳು ಮತೀಯ ಭಾವನೆಗಳನ್ನು ಪ್ರಚೋದಿಸಿ ಗಲಭೆಗಳನ್ನು ಹುಟ್ಟು ಹಾಕುವುದನ್ನೇ ತಮ್ಮ ಗುರಿಯನ್ನಾಗಿ ಮಾಡಿಕೊಂಡಿವೆ.

ಜನವರಿ 31 ರಿಂದ ಫೆಬ್ರವರಿ 14 ರವರೆಗೆ ವಿಶ್ವ ಹಿಂದೂ ಪರಿಷತ್ 'ಜನಜಾಗರಣ' ಎಂಬ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಕೊನೆಯ ದಿನ ಪೂನಾ ನಗರದಲ್ಲಿ 'ಹಿಂದೂ ಐಕ್ಯ' ಎಂಬ ಮೆರವಣಿಗೆಯನ್ನು ಏರ್ಪಡಿಸಿತ್ತು. ಪೂನಾ, ಸೋಲಾಪುರ ಮತ್ತು ಬಾರಾಮತಿ ಮತ್ತಿತರ ಕಡೆ ಕೇಸರಿ ಧ್ವಜಗಳ ಹಾರಾಟ ಜೋರಾಗಿತ್ತು.

ಈ 'ಜನಜಾಗರಣ' ಕಾರ್ಯಕ್ರಮ ಮತ್ತು 'ಹಿಂದೂ ಐಕ್ಯ' ಮೆರವಣಿಗೆಯ ಕಾರ್ಯಕ್ರಮದಲ್ಲಿ ಎಡ ಪಕ್ಷಗಳನ್ನು ಹೊರತುಪಡಿಸಿ ಹೆಚ್ಚಿನಂಶ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮಗಳಲ್ಲಿ ಕಾಂಗ್ರೆಸಿನಿಂದ ಹಿಡಿದು ಶಿವಸೇನೆ, ಬಿಜೆಪಿಯ ಮುಖಂಡರೆಲ್ಲ ಪಾಲ್ಗೊಂಡಿದ್ದರೆಂದು ಫೆಬ್ರವರಿ 20 ರಂದು ಸ್ಟೇಟ್ಸ್‌ಮನ್ ವರದಿ ಮಾಡಿದೆ.

'ಜನಜಾಗರಣ'ದ ಅಂಗವಾಗಿ ಫೆಬ್ರವರಿ 14 ರಂದು ನಡೆದ 'ಹಿಂದೂ ಐಕ್ಯ' ಮೆರವಣಿಗೆ ಮಸೀದಿ (ಪೂನಾದಲ್ಲಿ)ಯ ಹತ್ತಿರ ಬಂದಾಗ ಪ್ರಚೋದನಕಾರಿ ಘೋಷಣೆಗಳನ್ನು ಕೂಗಲಾಯಿತು. ಮುಖ್ಯ ಘೋಷಣೆ 'ಮುಸ್ಲಿಂರೇ ಪಾಕಿಸ್ತಾನಕ್ಕೆ ತೆರಳಿ', ಹಿಂದೂಸ್ತಾನದಲ್ಲಿ ವಾಸಮಾಡಲಿಚ್ಛಿಸುವವರು 'ವಂದೇ ಮಾತರಂ' ಹಾಡಲೇ ಬೇಕು...... ಇತ್ಯಾದಿ.

ಮೆರವಣಿಗೆಯ ಒಂದು ವಿಭಾಗ ಮುಸ್ಲಿಂ ಜನತೆ ಹೆಚ್ಚಾಗಿರುವ ಡೆಕ್ಕನ್ ಜಮಖಾನಾ ಎಂಬಲ್ಲಿ ತೆರಳಿ ಅಲ್ಪಸಂಖ್ಯಾತರಿಗೆ ಸೇರಿದ ಎರಡು ಹೋಟೆಲ್‌ಗಳನ್ನು ಲೂಟಿ ಮಾಡಿತು. ಹೆಚ್ಚೂ ಕಡಿಮೆ ಇದೇ ರೀತಿಯ ಕೃತ್ಯಗಳು ಸೋಲಾಪುರ ಮತ್ತಿತರ ಕಡೆ ನಡೆದವು.

ಈ ಹೇಯ ಮತೀಯ ಗಲಭೆಯ ಕೃತ್ಯವನ್ನು ಕುರಿತು ಪಾರ್ಲಿಮೆಂಟಿನ ಉಭಯ ಸದನಗಳಲ್ಲೂ ಪ್ರಶ್ನೆ ಎತ್ತಲಾಯಿತು.

(8ನೇ ಪುಟವನ್ನು ನೋಡಿ)

ವಕೀಲರ ಮೇಲೆ ಹಲ್ಲೆ : ಖಂಡನೆ

ಗುಂಡೂರಾಯರ, ನಿಜಾಮುದ್ದೀನರ ಕಾರುಭಾರಿನಲ್ಲಿ ಬೆಂಗಳೂರಿನಲ್ಲಿ ಮಾರ್ಚ್ 2 ರಂದು ನಡೆದ ಘಟನೆ ನಿಜವಾಗಿ ಹೇಯವಾದದ್ದು. ನಗರದ ಪೋಲಿಸ್ ಅಧಿಕಾರಿಯೊಬ್ಬನಿಗೆ ಜೀಪ್ ಮುಂದೆ ಹೋಗಲು ಸ್ಥಳ ಕೊಡಲಿಲ್ಲ ಎಂದು ಕ್ಷುಲ್ಲಕ ಘಟನೆ ಮುಂದುಮಾಡಿ ಖ್ಯಾತ ನ್ಯಾಯವಾದಿ ಶ್ರೀ ಪುಟ್ಟಸ್ವಾಮಿ ಮತ್ತಿತರರ ಮೇಲೆ ಆ ಪೋಲಿಸ್ ಅಧಿಕಾರಿ 'ಕೈ' ಮಾಡಿದ ಘಟನೆ ವರದಿಯಾಗಿದೆ.

ಹಾಡೇ ಹಗಲು ನಡೆದ ಈ ಘಟನೆ ನಡೆದ ಕೂಡಲೇ ಎಲ್ಲಾ ವಕೀಲರು ಸಭೆ ಸೇರಿ ಹಲ್ಲೆ ಮಾಡಿದ ಪೋಲಿಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡುವಂತೆ ಒತ್ತಾಯಿಸಿದ್ದರೂ ಸರ್ಕಾರ ಕಿವಿ ಕೊಟ್ಟಿಲ್ಲ.

ರಾಜ್ಯ ಅಡ್ವೋಕೇಟ್ ಜನರಲ್‌ರು ಘಟನೆ ನಡೆದ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ಅರಿತು ನಿಜಾಮುದ್ದೀನ್‌ರಿಗೆ ಫೋನ್ ಮಾಡಿದರೂ, ನಿಜಾಮುದ್ದೀನ್ ಸ್ಥಳಕ್ಕೆ ಬರದೆ ಉದ್ಧಟತನ ತೋರಿಸಿದ್ದಾರೆ. ಡೈರೆಕ್ಟರ್ ಜನರಲ್ ರಾವ್ ಬಂದೊಡನೇ ನಿಜಾಮುದ್ದೀನ್ ಧಾವಿಸಿ ಬಂದರು.

ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿ ಬಾರ್ ಕೌನ್ಸಿಲ್‌ನವರು 3-3-82 ರಂದು ನ್ಯಾಯಾಲಯ ಬಹಿಷ್ಕರಿಸಿ ರಾಜ್ಯ ಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟರಿಯೇಟ್ ವಕೀಲರ ಮೇಲೆ ನಡೆದ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದೆ. ಈ ಘಟನೆ ಸರಕಾರದ 'ನ್ಯಾಯ ಪಾಲನೆ'ಗೆ ನಿದರ್ಶನ ಎಂದಿದೆ.

ಪ್ರತಿಷ್ಠಿತ ವಕೀಲರನ್ನೇ ನಮ್ಮ ಪೋಲಿಸ್ ಅಧಿಕಾರಿ ಮಹಾಶಯರು ಬಿಟ್ಟಿಲ್ಲ. ಇನ್ನು ಜನಸಾಮಾನ್ಯರ ಪಾಡೇನು ?

ವಕೀಲರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿರುವ ಸಿ. ಪಿ. ಐ. (ಎಂ.) ಜನತೆ ಪ್ರತಿಭಟನೆಗೆ ಸಿದ್ಧವಾಗದಿದ್ದಲ್ಲಿ ರಾಜ್ಯ ಪೋಲಿಸ್ ರಾಜ್ಯವಾದೀತು ಎಂದು ಎಚ್ಚರಿಸಿದೆ.

ರೈತರಿಗೆ ಆದ ಅನ್ಯಾಯಗಳ ವಿರುದ್ಧ

ತೀವ್ರ ಚಳುವಳಿ ನಡೆಸಲು ಜಿಲ್ಲಾ ರೈತ ಸಮ್ಮೇಳನದ ತೀರ್ಮಾನ

ದ.ಕ. ಜಿಲ್ಲೆಯಲ್ಲಿ ಭೂನ್ಯಾಯ ಮಂಡಳಿಗಳ ತೀರ್ಪುಗಳಿಂದ ಭಾರೀ ಸಂಖ್ಯೆಯಲ್ಲಿ ರೈತರಿಗೆ ಅನ್ಯಾಯವಾಗಿದ್ದು, ಈ ಅನ್ಯಾಯದ ತೀರ್ಮಾನಗಳನ್ನು ಪುನರ್ ವಿಮರ್ಶಿಸಲು ಜಿಲ್ಲಾ ಮಟ್ಟದಲ್ಲಿ ಸರ್ವ ಪಕ್ಷಗಳ ಪ್ರತಿನಿಧಿಗಳಿರುವ ನ್ಯಾಯ ಮಂಡಳಿಗಳ ರಚನೆಯಾಗಬೇಕೆಂದು ಒತ್ತಾಯಿಸಲು ಜಿಲ್ಲೆಯಾದ್ಯಂತ ತೀವ್ರ ಚಳುವಳಿ ನಡೆಸಲು ದ.ಕ. ಜಿಲ್ಲಾ ರೈತ ಸಂಘವು ತೀರ್ಮಾನಿಸಿದೆ.

ಉಡುಪಿ ತಾಲ್ಲೂಕಿನ 'ಕಾಪು'ವಿನಲ್ಲಿ ಫೆಬ್ರವರಿ 27 ಮತ್ತು 28 ರಂದು ಜರುಗಿದ ದ.ಕ. ಜಿಲ್ಲಾ ರೈತ ಸಂಘದ 7ನೇ ಸಮ್ಮೇಳನದಲ್ಲಿ ಈ ತೀರ್ಮಾನವನ್ನೊಳಗೊಂಡ ಠರಾವನ್ನು ಅಂಗೀಕರಿಸಲಾಯಿತು.

ಸುಳ್ಯದ ನ್ಯಾಯವಾದಿ ಕಾಂ| ಸೂರ್ಯನಾರಾಯಣ ಭಟ್, ಮುಳಲಿಯ ಎಂ. ಎಸ್. ನಾರಾಯಣ ಇವರನ್ನೊಳಗೊಂಡ ಅಧ್ಯಕ್ಷ ಮಂಡಲಿಯು ಸಮ್ಮೇಳನದ ಎರಡು ದಿನಗಳ ಕಲಾಪಗಳನ್ನು ನಿರ್ವಹಿಸಿತು.

ಜಿಲ್ಲೆಯ ರೈತ ಚಳುವಳಿಯ ಹಿರಿಯ ಮುಂದಾಳು ಕಾಂ| ಕೆ. ವಿ. ರಾವ್ ಎಳಚಿತ್ತಾಯರು ಮೊದಲು ಧ್ವಜಾರೋಹಣ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಪಿ. ರಾಮಚಂದ್ರರಾಯರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ, ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ಕಳೆದ ಐದು ದಶಕಗಳಿಂದ ದೇಶಾದ್ಯಂತ ನಡೆದ ರೈತರ ಧೀರ ಹೋರಾಟಗಳ ಹಿನ್ನೆಲೆಯನ್ನು ವಿವರಿಸಿದರು. ಇಂದು ರೈತರು ಅನುಭವಿಸುತ್ತಿರುವ ಅಲ್ಪ ಪ್ರಮಾಣದ ಸವಲತ್ತುಗಳೂ, ಭೂ ಸುಧಾರಣಾ ಕಾನೂನುಗಳೂ ರೈತ ಸಂಘವು ನಡೆಸಿದ ಹೋರಾಟ, ತ್ಯಾಗ, ಬಲಿದಾನಗಳ ಫಲವಾಗಿ ದೊರೆತವುಗಳೆಂಬುದನ್ನು ಮರೆಯಬಾರದೆಂದು ಕಾಂ| ಪಿ. ಆರ್. ಒತ್ತಿ ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ಬೆಳೆದು ಬಂದ ಧೀರ ಹೋರಾಟಗಳು ರೈತರು ತಮ್ಮ ಹಕ್ಕುಗಳ ಕುರಿತು ಹೆಚ್ಚು ಹೆಚ್ಚಾಗಿ ಜಾಗೃತರಾಗುತ್ತಿರುವುದನ್ನೂ ಎತ್ತಿ ತೋರಿಸುತ್ತಿದೆಯೆಂದು ಹೇಳಿದರು.

ಉಡುಪಿಯ ಖ್ಯಾತ ನ್ಯಾಯವಾದಿ ಮತ್ತು ದ. ಕ. ಜಿಲ್ಲಾ ಮೂರ್ತೆದಾರರ ಸಂಘದ ಅಧ್ಯಕ್ಷರಾದ ಶ್ರೀ ಶ್ರೀಧರ ಕಲ್ಮಾಡಿಯವರು ಮತ್ತು ಸಿ. ಐ. ಟಿ. ಯು. ವಿನ ದ. ಕ. ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕಾಂ! ಬಿ. ಮಾಧವ ಅವರು ಕಾರ್ಮಿಕರ ಪರವಾಗಿ ಸಮ್ಮೇಳನಕ್ಕೆ ಶುಭಾಶಯಗಳನ್ನು ನೀಡಿದರು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ| ಯು. ಜನಾರ್ಧನ್ ನಾಯಕ್‌ರು ಸಲ್ಲಿಸಿದ ವರದಿಯನ್ನು ಸುದೀರ್ಘ ಚರ್ಚೆಯ ನಂತರ ಅಂಗೀಕರಿಸಲಾಯಿತು. ಚರ್ಚೆಯಲ್ಲಿ 14 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

ನಿರ್ಣಯಗಳು

ಪಂಚಾಯತ್ ಪ್ರದೇಶಗಳನ್ನೊಳಗೊಂಡು ಇಡೀ ಜಿಲ್ಲೆಯಲ್ಲಿ ಮನೆ ತೆರಿಗೆಯನ್ನು ವಿಪರೀತವಾಗಿ ಏರಿಸಿರುವು

(8ನೇ ಪುಟವನ್ನು ನೋಡಿ)

ಪ್ರಾಂತ ರೈತ ಸಂಘದ 2ನೇ ಸಮ್ಮೇಳನಕ್ಕೆ ಶುಭಾಶಯಗಳು

ರೈತರ ಸಾಮೂಹಿಕ ಕಾರ್ಯಾಚರಣೆ ಅತ್ಯಗತ್ಯ

ಪಿ. ರಾಮಚಂದ್ರರಾವ್

ದೇಶವು ಇಂದು ಸಂದಿಗ್ಧ ಸಂಸ್ಥಿತಿಯನ್ನು ಹಾದುಹೋಗುತ್ತಾ ಇದೆ. ದೇಶವು ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಆದ್ದರಿಂದಲೇ 34 ವರ್ಷಗಳಲ್ಲಿ ದೇಶವನ್ನು ಆ ಸೇತು ಹಿಮಾಚಲ ಪರ್ಯಂತ ಆಳುತ್ತಾ ಬಂದ ಕಾಂಗ್ರೆಸ್ಸು ಒಡೆದು ಹಲವು ಚೂರುಗಳಾಯಿತು. ಆದ್ದರಿಂದಲೇ 34 ವರ್ಷಗಳಲ್ಲಿ ಯಾವ ಪ್ರಜಾಪ್ರಭುತ್ವ ಸಂವಿಧಾನವು ಆಳುವ ವರ್ಗಗಳಿಗೆ ಅನುಕೂಲವಾಗಿದ್ದುದು ಈ ದಿನ ತಮ್ಮ 'ಆಳ್ವಿಕೆ'ಗೆ ಅದು ಅಡ್ಡಿಯಾಗಿ ಅವರಿಗೆ ಕಾಣುತ್ತಿದೆ. ನ್ಯಾಯಾಂಗವನ್ನೇ ಕಾರ್ಯಾಂಗವು ನುಂಗಿಬಿಡುವ ಪ್ರವೃತ್ತಿ ಎದ್ದು ತೋರುತ್ತಿದೆ.

ಇಂದಿರಾ ಗಾಂಧಿ 1969ರ ನಂತರ ಹಲವಾರು ಅಗ್ಗದ ಜನಪ್ರಿಯ ಘೋಷಣೆಗಳನ್ನು ಕೊಟ್ಟು ದೇಶದ ಈ ಬಿಕ್ಕಟ್ಟನ್ನು ತನ್ನದೇ ಆದ ರೀತಿಯಲ್ಲಿ ಬಗೆಹರಿಸಲು ಪ್ರಯತ್ನಿಸುತ್ತಾ ಬಂದರು. ಬ್ಯಾಂಕ್ ರಾಷ್ಟ್ರೀಕರಣ, ರಾಜರ ವರ್ಷಾಸನ ರದ್ದು, ಗರೀಬಿ ಹಟಾವೋ, 20 ಪಾಯಿಂಟ್, ಸಂಜಯ ಗಾಂಧಿಯ 5 ಪಾಯಿಂಟ್, ತುರ್ತು ಪರಿಸ್ಥಿತಿ, ಹರಿಜನ-ಗಿರಿಜನ–ಅಲ್ಪಸಂಖ್ಯಾತರ ಅಭಿವೃದ್ಧಿ ಪುನಃ ಇನ್ನೊಂದು 20 ಪಾಯಿಂಟ್‌ಗಳ ಸ್ಕೀಮ್...ಏನೇನೊ ಘೋಷಣೆ ಕೊಟ್ಟರು. ಕೆಲವೊಮ್ಮೆ ಜನಸಾಮಾನ್ಯರ ಮತಗಳನ್ನು ಗಳಿಸಿ ತಮ್ಮ ಸರ್ವಾಧಿಕಾರವನ್ನು ಅಧಿಕಗೊಳಿಸಲು ಸಾಧ್ಯವಾಯಿತಷ್ಟಲ್ಲದೆ, ದೇಶದ ಬಿಕ್ಕಟ್ಟು ಅಲ್ಪ ಸ್ವಲ್ಪವಾದರೂ ಪರಿಹರಿಸಲ್ಪಡಲಿಲ್ಲ.

ಬೆಲೆಗಳನ್ನು ಇಳಿಸುತ್ತೇವೆ–ನಮ್ಮನ್ನು ಅಧಿಕಾರಕ್ಕೆ ಏರಿಸಿರಿ, ಜನತೆಗೆ ಕಾರ್ಯ ಮಾಡುವ ಸರಕಾರವನ್ನು ಕೊಡುತ್ತೇವೆ—ನಮ್ಮನ್ನು ಅಧಿಕಾರಕ್ಕೆ ಏರಿಸಿರಿ ಎಂದು ಇಂದಿರಾ ಗಾಂಧಿ 1980 ಜನವರಿ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಘೋಷಿಸಲಿಲ್ಲವೇ ? ಆದರೆ, ಅಧಿಕಾರ ಬಂದು ಈಗ 2 ವರ್ಷಗಳು ಉರುಳಿದರೂ ಈ ಘೋಷಣೆಗಳು ಎಷ್ಟರ ಮಟ್ಟಿಗೆ ಜ್ಯಾರಿಯಾಗಿವೆ ? ಬೆಲೆಗಳು ವಿಪರೀತವಾಗಿ ಏರುತ್ತಾ ಹೋಗುತ್ತಿವೆ. ಹಣದ ಅತಿ ಪ್ರಸರಣ ಹೆಚ್ಚೆಚ್ಚು ಹೋಗುತ್ತಿದೆ. ರೂಪಾಯಿ ಬೆಲೆ ಕುಗ್ಗುತ್ತಾ ಹೋಗುತ್ತಿದೆ. ಕಾಂಗ್ರೆಸ್ (ಐ) ಸರಕಾರಗಳು ತಮ್ಮ ಆಡಳಿತ ಇರುವ ರಾಜ್ಯಗಳಲ್ಲಿ ಕಾನೂನು ಮತ್ತು ವ್ಯವಸ್ಥೆಯನ್ನೇ ಕಾಪಾಡುವ ಸಾಮಾನ್ಯ ಸ್ಥಿತಿಯಲ್ಲೂ ಇಲ್ಲ.

ದಲಿತರ ಮೇಲೆ ಧಾಳಿ, ದಲಿತರ ಕೊಲೆ, ದಲಿತ ಹೆಂಗಸರ ಮಾನಭಂಗ, ಗಿರಿಜನರನ್ನು ಸಾಮೂಹಿಕವಾಗಿ ಕಂಟ್ರಾಕ್ಟ್‌ದಾರರು ಸುಲಿದು ಹಿಪ್ಪೆ ಮಾಡುವ ಸ್ಥಿತಿ, ಮುಸ್ಲಿಂರ ಮೇಲೆ ಜಾತೀಯ ಧಾಳಿ ಸತತವಾಗಿ ನಡೆಯುತ್ತಿದೆ. ಪೋಲೀಸರ ಮತ್ತು ಅಧಿಕಾರಗಳನ್ನು ನಿಯಂತ್ರಣ ಮಾಡುವ ಸ್ಥಿತಿಯಲ್ಲೂ ಇಂದಿರಾ ಕಾಂಗ್ರೆಸ್ ಪಕ್ಷವು ಇಲ್ಲದಂತಾಗಿದೆ.

ಇದೇ ಸಮಯದಲ್ಲಿ ಎಂಬಂತೆ ದೇಶದ ರೈತರು ಎಲ್ಲಾ ರಾಜ್ಯಗಳಲ್ಲೂ ಜಾಗೃತರಾಗುತ್ತಿದ್ದಾರೆ. ಹೋರಾಟದ ಹಾದಿ ಹಿಡಿಯುತ್ತಿದ್ದಾರೆ. ಪ್ರದರ್ಶನಗಳನ್ನು ಮಾಡುತ್ತಿದ್ದಾರೆ.

ಒಂದು ಕಾಲವಿತ್ತು, ಹಿಂದೀ ಪ್ರದೇಶಗಳ ರೈತಾಪಿ ಬಡಜನತೆ ಕಾಂಗ್ರೆಸ್ಸಿಗೆ ಬೆಂಬಲವಾಗಿದ್ದ ಕಾಲ. ಆದರೆ ಇಂದು ಒಂದು-ಎರಡಲ್ಲ ಹಲವು ಬಾರಿ ಹಿಂದೀ ಪ್ರದೇಶಗಳ ರೈತರು ಬಡ ಕೃಷಿ ಕೂಲಿಗಾರರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಪಾರ್ಲಿಮೆಂಟಿನ ಎದುರು ಪ್ರದರ್ಶನ ಮಾಡುತ್ತಿದ್ದಾರೆ.

ಹಿಂದುಳಿದ ರಾಜ್ಯಗಳಲ್ಲೂ ರೈತರು ಹೋರಾಟಕ್ಕಿಳಿಯುತ್ತಿದ್ದಾರೆ. ಬಂದೂಕುಗಳನ್ನು ಎದುರಿಸುತ್ತಿದ್ದಾರೆ. ಗುಂಡಿಗೆ ಆಹುತಿಯಾಗುತ್ತಿದ್ದಾರೆ.

ರೈತರ ಬೇಡಿಕೆಗಳೇನು ?

"ನಮ್ಮ ಬೆಳೆಗಳಿಗೆ ನ್ಯಾಯವಾದ ಬೆಲೆಗಳನ್ನು ಕೊಡಿರಿ. ನಮ್ಮ ಸಾಲವನ್ನು ರದ್ದು ಮಾಡಿರಿ. ನಮಗೆ ಕೃಷಿಗೆ ಅವಶ್ಯಕವಾದ ವಸ್ತುಗಳನ್ನು ಕಡಿಮೆ ಕ್ರಯದಲ್ಲಿ ಒದಗಿಸಿರಿ."

ರೈತ ಕೃಷಿ ಕೂಲಿಗಾರರ ಬೇಡಿಕೆಗಳೇನು ?

"ನಮಗೆ ನ್ಯಾಯವಾದ ಕೂಲಿ ಕೊಡಿರಿ. ನಮಗೆ ಮನೆ ನಿವೇಶನಗಳನ್ನು ಕೊಡಿರಿ. ನಮಗೆ ಚಿಕ್ಕ, ಚೊಕ್ಕ ಮನೆಗಳನ್ನು ಕಟ್ಟಿಸಿ ಕೊಡಿರಿ. ವರ್ಷವಿಡೀ ಕೆಲಸ ಕೊಡಿರಿ"

ಗ್ರಾಮಾಂತರ ಪ್ರದೇಶಗಳ ಈ ಜನತೆ ಬಡ, ಮಧ್ಯಮ, ಶ್ರೀಮಂತ ರೈತ ಮತ್ತು ಕೃಷಿ ಕೂಲಿಗಾರರು-ಇಂದು ಜಾಗ್ರತರಾಗಿ, ತಮ್ಮ ಬೇಡಿಕೆಗಳನ್ನು ರೂಪಿಸಿ, ಅವುಗಳನ್ನು ಪಡೆಯಲು ಸಂಘಟಿತರಾಗುತ್ತಿದ್ದಾರೆ. ಹೋರಾಟಗಳನ್ನು ಮಾಡಲು ಮುಂದಾಗುತ್ತಿದ್ದಾರೆ.

34 ವರ್ಷಗಳ ದೇಶದ ಅಭಿವೃದ್ಧಿ ಎಲ್ಲಿ ಹೋಯಿತು ಎಂದು ರೈತರು ಕೃಷಿ ಕೂಲಿಗಾರರು, ಪೇಟೆ ಪಟ್ಟಣಗಳ ಕಾರ್ಮಿಕರ ಜತೆ ಸೇರಿ, ಸರಕಾರವನ್ನು ಕೇಳುತ್ತಿದ್ದಾರೆ. 34 ವರ್ಷಗಳಿಂದ ಆಳುತ್ತಾ ಬಂದ ಕಾಂಗ್ರೆಸ್ ಸರಕಾರವನ್ನು ಕೇಳುತ್ತಾ ಇದ್ದಾರೆ.

ನೀವೇ ನೋಡಿರಿ. ತುಲನೆ ಮಾಡಿರಿ. ತೀರ್ಪು ಕೊಡಿರಿ. ಸಕ್ಕರೆ ಬೆಲೆ ಎಷ್ಟು ? ಕಬ್ಬಿನ ಬೆಲೆ ಎಷ್ಟು ? ಬೀಡಿ, ಸಿಗರೇಟು ಬೆಲೆಯೆಷ್ಟು ? ತಂಬಾಕಿನ ಬೆಲೆ ಎಷ್ಟು ? ಬಟ್ಟೆಯ ಬೆಲೆಯೆಷ್ಟು ? ಅರಳೆಯ ಬೆಲೆಯೆಷ್ಟು ?

ಅದೇ ಸಮಯದಲ್ಲಿ, ರೈತರು, ಕೃಷಿ ಕೂಲಿಗಾರರು ಉಪಯೋಗಿಸುವ ನಿತ್ಯ ವಸ್ತುಗಳ ಬೆಲೆಗಳು ಎಷ್ಟು ? ಕೃಷಿಗೆ ರೈತರು ಉಪಯೋಗಿಸುವ ಗೊಬ್ಬರ, ಕ್ರಿಮಿನಾಶಕ ಉಪಕರಣಗಳ ಬೆಲೆಗಳೆಷ್ಟು ? ಅವರು ಹಗಲು ರಾತ್ರಿ ದುಡಿದು, ಮಳೆ ಬಿಸಿಲು ಚಳಿ ಎನ್ನದೆ ದುಡಿದು, ಉತ್ತು ಬಿತ್ತಿ ಬೆಳೆಸಿದ ಬೆಳೆಗಳ ಬೆಲೆ ಎಷ್ಟು ?

ರೈತರ, ಕೃಷಿ ಕೂಲಿಗಾರರ ಮತ್ತು ಕಾರ್ಮಿಕರ ದುಡಿತದ, ಶ್ರಮದ ಫಲವು "ಕಳೆದ 34 ವರ್ಷಗಳಲ್ಲಿ ದೊಡ್ಡ ವ್ಯಾಪಾರಸ್ಥರ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳಕೈಬೆರಳೆಣಿಕೆಯಷ್ಟು ಮಂದಿಗೆ ಕಬಳಿಸಲು ಸಾಧ್ಯವಾದುದೇ ಅದನ್ನು ಸಾಧ್ಯವಾಗುವಂತೆ ಮಾಡಿ ಕೊಟ್ಟ ಕಾಂಗ್ರೆಸ್ಸು ಬಂಡವಾಳಶಾಹಿ ನೀತಿಯೇ–ಈ ದುಃಸ್ಥಿತಿಗೆ ಕಾರಣ.

ಈ ನೀತಿ ಬದಲಾವಣೆಯೇ ದೇಶದ ರೈತರ ಮುಂದಿರುವ ಪ್ರಶ್ನೆಯಾಗಿದೆ.

ಈ ಪ್ರಶ್ನೆಯನ್ನು ಬಗೆಹರಿಸಲೋಸುಗ ವಿಶಾಲ ಪ್ರಮಾಣದಲ್ಲಿ ಈ ತನಕ ಕಂಡರಿಯದ ರೀತಿಗಳಲ್ಲಿ–ರೈತರು ಜಾಗ್ರತರಾಗುತ್ತಿದ್ದಾರೆ. ಒಗ್ಗಟ್ಟಾಗುತ್ತಿದ್ದಾರೆ, ಹೋರಾಟಕ್ಕಿಳಿಯುತ್ತಿದ್ದಾರೆ.

ದೇಶದ ದಿಗಂತದಲ್ಲಿ ಹೊಸ ಹಾದಿಯನ್ನು ತೋರಿಸುತ್ತಿದ್ದಾರೆ.

ಈ ದಿಕ್ಕಿನಲ್ಲಿ ರೈತರಿಗೆ ಸಹಾಯ ಮಾಡುವುದು ರೈತರ–ಕೃಷಿ ಕೂಲಿಗಾರರ ಜತೆಗೂಡಿ "ರೈತರ ಹಿತ ಬೇರೆಯಲ್ಲ, ಕೃಷಿ ಕೂಲಿಗಾರರ ಹಿತ ಬೇರೆಯಲ್ಲ" ಎಂದು ಅನುಭವದಿಂದ ತೋರಿಸಿ, ಒಟ್ಟಾಗಿ ಹೋರಾಡೋಣ. ಒಟ್ಟಾಗಿ ನಾವು ಉತ್ಪತ್ತಿ ಮಾಡುವ, ಅಭಿವೃದ್ಧಿಯ ಫಲವನ್ನು ಉಣ್ಣೋಣ ಎಂದು ರೈತ ಸಂಘವು, ಪ್ರಾಂತ ರೈತ ಸಂಘವು, ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ತೋರಿಸುತ್ತಿದೆ.

ರೈತರ ಸಾಮೂಹಿಕ ಕಾರ್ಯಾಚರಣೆಯ ಮೂಲಕ ಮಾತ್ರ ಈ ಹಾದಿ ಸಾಧ್ಯ. ●

ದಲಿತರ ಮೇಲೆ ನಡೆದ ಹಲ್ಲೆಯ ಖಂಡನೆ

28-2-82 ರಂದು ಬೆಂಗಳೂರಿನಲ್ಲಿ ಕೆಲವು ಮಂತ್ರಿಗಳ ಮನೆ ಎದುರು ಮತಪ್ರದರ್ಶನ ನಡೆಸುತ್ತಿದ್ದ ದ.ಸಂ.ಸ. ಕಾರ್ಯಕರ್ತರನ್ನು ಪೋಲಿಸರು ಅಮಾನುಷವಾಗಿ ಥಳಿಸಿದ್ದಾರೆ.

ದೇಶಾದ್ಯಂತ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿ ಈ ಮತಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಮತಪ್ರದರ್ಶಕರ ಬೇಡಿಕೆಗಳಿಗೆ ಕಿವಿಗೊಡುವ ಬದಲು, ಪ್ರತಿಭಟನೆಯನ್ನೇ ಬಗ್ಗುಬಡಿಸುವ ಸನ್ನಾಹ ನಡೆಯಿತು.

ಕೋಲಾರದ ಕೆ.ಜಿ.ಎಫ್.ನ ಶಾಸಕ ಆಮರ್ುಗಂರ ಮನೆ ಎದುರು ಧರಣಿ ನಡೆಸುತ್ತಿದ್ದ ದ.ಸಂ.ಸ. ಕಾರ್ಯಕರ್ತರನ್ನು ಆಮರ್ುಗಂರ ಚೇಲಾಗಳು ಥಳಿಸಿದ್ದಾರೆ. ಇದೇ ಗೂಂಡಾಗಳು ಕೋಲಾರದಲ್ಲಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ವರದಿಗಾರರನ್ನೂ ಥಳಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ದಲಿತರ ಮೇಲೆ ನಡೆದ ಅಮಾನುಷ ಹಲ್ಲೆಯನ್ನು, ಪತ್ರಿಕಾ ವರದಿಗಾರರ ಮೇಲೆ ನಡೆದ ದಾಳಿಯನ್ನು ತೀವ್ರವಾಗಿ ಖಂಡಿಸಿದೆ.

ಗೂಂಡಾಗಿರಿಯ ಈ ಕೃತ್ಯಗಳನ್ನು ತಡೆಗಟ್ಟದಿದ್ದಲ್ಲಿ ತೀವ್ರ ಪರಿಣಾಮ ಎದುರಿಸಬೇಕಾದೀತೆಂದು ಎಚ್ಚರಿಸಿದೆ.

ಪೋಲೀಸ್ ಪಾಳ್ಯವಾಗಿ ಮಾರ್ಪಟ್ಟ ಅವಳಿ ನಗರಗಳು

ಗುಂಡೂರಾಯರ ಟೂರಿಂಗ್ ಕಂಪನಿ ಫೆಬ್ರವರಿ 18–19 ರಂದು ಶಿವಮೊಗ್ಗದಲ್ಲಿ ತಳವೂರಿತ್ತು. ಈ ಸಂದರ್ಭದಲ್ಲಿ ಅವಳಿ ನಗರಗಳಾದ ಶಿವಮೊಗ್ಗ ಮತ್ತು ಭದ್ರಾವತಿ ಪೋಲೀಸ್ ಪಾಳ್ಯಗಳಾಗಿ ಮಾರ್ಪಟ್ಟಿದ್ದವು. ಎಲ್ಲಿ ನೋಡಿದರೂ ಗರಿ ಗರಿ ಬಟ್ಟೆ ಹಾಕಿಕೊಂಡು ಪೋಲೀಸ್ ಅಧಿಕಾರಿಗಳೂ, ಪೋಲೀಸರು ಕಂಡು ಬರುತ್ತಿದ್ದರು.

ಫೆ. 18 ರಂದು ಭದ್ರಾವತಿಗೆ ಗುಂಡೂರಾವ್ ಬರುವ ಸೂಚನೆ ಇದ್ದುದರಿಂದ ಏನಾದರೂ ಸಂಭವಿಸೀತೆಂಬ ಭಯದಿಂದ ವಿರೋಧ ಪಕ್ಷಗಳವರನ್ನು ಪೋಲೀಸರು ಬಂಧಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾಂ| ಮಹಮ್ಮದ್ ರಫಿ ಮತ್ತು ಸಿ. ಪಿ. ಐ. ನ ಕಾಂ| ವೆಂಕಟಪ್ಪ ಇವರುಗಳನ್ನು 19ನೇ ರಾತ್ರಿಯವರೆಗೆ ಬಂಧನದಲ್ಲಿಡಲಾಗಿತ್ತು. ಬಂಧಿತರಿಗೆ ಅನ್ನ ನೀರೂ ಸಹ ಕೊಟ್ಟಿರಲಿಲ್ಲ.

ಎರಡೂ ನಗರಗಳಲ್ಲಿ ನಿಷೇದಾಜ್ಞೆಯನ್ನು ಜಾರಿ ಮಾಡಲಾಗಿತ್ತು. ಪೋಲೀಸರ ಬೆಂಗಾವಲಿನಲ್ಲಿ ಶಿಖಂಡಿಯ ರೀತಿ ಕಾರ್ಯವೆಸಗುತ್ತಿರುವ ಗುಂಡೂರಾಯರ ಕಾರ್ಯ ವೈಖರಿಯನ್ನು ಕಟುವಾಗಿ ಟೀಕಿಸಿರುವ ಭದ್ರಾವತಿ ಪಕ್ಷದ ಘಟಕವು 'ಈ ಬಂಧನ ಪ್ರಜಾತಂತ್ರವನ್ನು ಗಾಳಿಗೆ ತೂರಿದಂತಾಗಿದೆ' ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದೆ.

ಗುಲ್ಬರ್ಗಾ, ಮೈಸೂರು ಮುಂತಾದೆಡೆ ಮಾಡಿದಂತೆ ಗುಂಡೂರಾಯರು ಶಿವಮೊಗ್ಗೆಯಲ್ಲೂ ವಾಗ್ದಾನಗಳ ಸುರಿಮಳೆ ತೆರೆದಿದ್ದಾರೆ.

ಶಿವಮೊಗ್ಗೆಯಲ್ಲಿ ಬೇರೆ ಬೇರೆ ಕೋಮಿನವರು ರಾಯರಿಗೆ ಸತ್ಕಾರ ಸಮಾರಂಭ ಏರ್ಪಡಿಸಿದ್ದರು. ಸ್ವಾರಸ್ಯವೆಂದರೆ ಸ್ಥಳೀಯ ಜನತಾ ಪಕ್ಷ, ಭಾರತೀಯ ಜನತಾ ಪಕ್ಷಗಳ ಮುಖಂಡರು ಅವರವರ ಕೋಮಿನವರು ವ್ಯವಸ್ಥೆಗೊಳಿಸಿದ್ದ ಸನ್ಮಾನ ಸಮಾರಂಭಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದು. ●

ರಾಷ್ಟ್ರದ ಋಣಭಾರ 48,084 ಕೋಟಿ ರೂ.

ರಾಷ್ಟ್ರದ ಸಾರ್ವಜನಿಕ ಸಾಲ ಕಳೆದ ಮೂವತ್ತೊಂದು ವರ್ಷಗಳಲ್ಲಿ ಸುಮಾರು ಇಪ್ಪತ್ತಮೂರು ಪಟ್ಟು ಹೆಚ್ಚಿದೆ. ಅದರಲ್ಲಿ ರಾಷ್ಟ್ರದಲ್ಲಿ ಎತ್ತಿದ ಸಾಲ ಹಾಗೂ ವಿದೇಶಗಳಿಂದ ಪಡೆದುಕೊಂಡ ಸಾಲವೂ ಸೇರಿದೆ.

1950–51 ರ ವರ್ಷಾಂತ್ಯದಲ್ಲಿ ರಾಷ್ಟ್ರದ ಸಾರ್ವಜನಿಕ ಸಾಲ 2054.33 ಕೋಟಿ ರೂ, ಗಳಾಗಿದ್ದುದು ಪ್ರಸಕ್ತ ಹಣಕಾಸು ವರ್ಷಾಂತ್ಯದ ವೇಳೆಗೆ ಅದು 48,084.29 ಕೋಟಿ ರೂ. ಗಳಿಗೆ ಹೆಚ್ಚಿದೆ.

ಈ ವಿಷಯವನ್ನು ಅರ್ಥ ಮಂತ್ರಿ ಪ್ರಣಬ್‌ಮುಖರ್ಜಿ ರಾಜ್ಯ ಸಭೆಗೆ ತಿಳಿಸಿದ್ದಾರೆ.

ಧರಣಿ ಸತ್ಯಾಗ್ರಹ

ಸಕಲೇಶಪುರ : ರಾಷ್ಟ್ರೀಯ ಆಂದೋಲನ ಸಮಿತಿಯು ನೀಡಿದ ಕರೆಯಂತೆ ಜನವರಿ 19ರ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಮೇಲೆ ಕ್ರಮಕೈಕೊಂಡಿದ್ದನ್ನು ವಿರೋಧಿಸಲು, 16 ಸೇವಾ ವಿಭಾಗಗಳನ್ನು ಅಗತ್ಯ ಸೇವೆಗಳೆಂದು ಘೋಷಿಸಿ, ಈ ಸೇವೆಗಳಲ್ಲಿ ಮುಷ್ಕರ ನಡೆಸುವವರನ್ನು ರಾಷ್ಟ್ರೀಯ ಭದ್ರತಾ ಶಾಸನದಂತೆ ಬಂಧಿಸಲು ಸಾಧ್ಯವಾಗುವಂತೆ ಕೇಂದ್ರ ಸರಕಾರವು ಹೊರಡಿಸಿದ ಪ್ರಕಟನೆಯನ್ನು ಪ್ರತಿಭಟಿಸಿ 23-2-82 ರಂದು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಸಿಐಟಿಯು ನೇತೃತ್ವದ ಕರ್ನಾಟಕ ತೋಟ ಕಾರ್ಮಿಕರ ಸಂಘದ ಕಾರ್ಯಕರ್ತರು ಅಂಚೆ ಕಚೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಈ ಧರಣಿ ಸತ್ಯಾಗ್ರಹ ಕಾರ್ಯಕ್ರಮದ ನೇತೃತ್ವವನ್ನು ಕಾಂ| ಪಾಲ್ ಡಿಸೋಜ ಮತ್ತಿತರರು ವಹಿಸಿದ್ದರು.

ದಾಂಡೇಲಿ : 23-2-82 ರಂದು ದಾಂಡೇಲಿಯಲ್ಲಿ ಸಿಐಟಿಯು ಕಾರ್ಯಕರ್ತರು ಸ್ಥಳೀಯ ಅಂಚೆ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಧರಣಿ ಸತ್ಯಾಗ್ರಹದ ಮುನ್ನ ಸಿಐಟಿಯು ಆಫೀಸಿನಿಂದ ಮೆರವಣಿಗೆ ಹೊರಡಿಸಲಾಗಿತ್ತು.

ಕಾಂ| ಉಮೇಶ್ ನಾಯ್ಕ ಧರಣಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಪ್ರಥಮ ಸ್ಥಾನದಲ್ಲಿ ಬೆಂಗಳೂರು

ಇತ್ತೀಚೆಗೆ ದೊರೆತಿರುವ ಬಳಕೆದಾರರ ಬೆಲೆ ಸೂಚ್ಯಂಕದ ಪ್ರಕಾರ ರಾಷ್ಟ್ರದಲ್ಲಿಯೇ ಭಾರಿ ಬೆಲೆ ಏರಿಕೆ ಹೊಂದಿರುವ ಕೀರ್ತಿಯನ್ನು ಬೆಂಗಳೂರು ನಗರ ಈಗಲೂ ಉಳಿಸಿಕೊಂಡಿದೆ.

1981ರ ಡಿಸೆಂಬರ್‌ನ (ಬೆಂಗಳೂರು) ಬಳಕೆದಾರರ ಸೂಚ್ಯಂಕದ ಪ್ರಕಾರ 523 ಪಾಯಿಂಟ್ (1960–100)ಗಳು. ಎರಡನೇ ಸ್ಥಾನ ಸೊಲ್ಲಾಪುರಕ್ಕೆ (521). ಮೂರನೇ ಸ್ಥಾನ ಗುಂಟೂರಿಗೆ (500 ಪಾಯಿಂಟ್‌ಗಳು),

"ಕರ್ನಾಟಕ ರಾಜ್ಯದಲ್ಲಿ ರೈತ ಚಳುವಳಿ"

"ಎಂ. ಕೆ."

ಕರ್ನಾಟಕ ರಾಜ್ಯದಲ್ಲಿನ ರೈತ ಚಳುವಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಮುಂದಿಡುವುದು ಈ ಟಿಪ್ಪಣಿಯ ಉದ್ದೇಶವಾಗಿದೆಯೇ ಹೊರತು ಇದೊಂದು ಸಮಗ್ರವಾದ ದಾಸ್ತಾವೇಜು ಅಲ್ಲ. ಕರ್ನಾಟಕ ರಾಜ್ಯದ ಆರ್ಥಿಕ, ಸಾಮಾಜಿಕ ಮತ್ತು ಚಾರಿತ್ರಿಕ ಹಿನ್ನೆಲೆ ಹಾಗೂ ಇತ್ತೀಚಿಗಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಜನತೆಯ ಮಧ್ಯೆ ಮೂಡುತ್ತಿರುವ ಪ್ರಜ್ಞೆ ಮತ್ತು ಬೆಳೆಯುತ್ತಿರುವ ಹೋರಾಟಗಳನ್ನು ಗಮನದಲ್ಲಿರಿಸಿ ರಾಜ್ಯದಲ್ಲಿ ರೈತ ಚಳುವಳಿಯ ಬಗ್ಗೆ ಸರಿಯಾದ ದೃಷ್ಟಿಕೋನವನ್ನಿರಿಸಿಕೊಳ್ಳಬೇಕು. ಬೆಳೆದು ಬರುತ್ತಿರುವ ಪ್ರಜ್ಞೆ ಮತ್ತು ಹೋರಾಟಗಳಿಗೆ ಸರಿಯಾದ ನೇತೃತ್ವವನ್ನಿತ್ತು, ಅವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕು.

ಬಂಡವಾಳಶಾಹಿ ಪಥ:

ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಇಂದಿನ ತನಕ ನಮ್ಮನ್ನು ಆಳಿಕೊಂಡು ಬಂದಿರುವ ಸರಕಾರಗಳು ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯಲು ಶ್ರಮಿಸುತ್ತಾ ಬಂದಿವೆ. ಆದರೆ ಯುರೋಪಿನ ರಾಷ್ಟ್ರಗಳಲ್ಲಿ ಆಗಿದ್ದಂತೆ ಹಳೆಯ ಊಳಿಗ ಮಾನ್ಯ ಭೂಸಂಬಂಧಗಳನ್ನು ನಾಶಮಾಡಿ ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸುವುದಕ್ಕೆ ಬದಲು ಭೂಮಾಲೀಕ ವರ್ಗದೊಂದಿಗೆ ರಾಜಿ ಮಾಡಿಕೊಂಡು ಬೆಳೆಸಲಾಗುತ್ತಿದೆ. ಭೂಮಾಲೀಕ ವರ್ಗದೊಂದಿಗೆ ರಾಜಿ ಮಾಡಿಕೊಂಡು ಸಾಮ್ರಾಜ್ಯಶಾಹಿ ಶಕ್ತಿಗಳ ಸಹಾಯ ಪಡೆದು ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸಲು ದೇಶದ ಬಂಡವಾಳಶಾಹಿ ಶಕ್ತಿಗಳು ಶ್ರಮಿಸುತ್ತಾ ಬಂದಿವೆ. ಆದುದರಿಂದ ಕೃಷಿ ರಂಗದಲ್ಲಿ ಭೂಸಂಬಂಧಗಳು ಕ್ರಾಂತಿಕಾರಿ ರೀತಿಯಲ್ಲಿ ಬದಲಾಗುವುದಕ್ಕೆ ಬದಲು ಸುಧಾರಣಾ ಮಾರ್ಗವನ್ನು ಅನುಸರಿಸುತ್ತಾ ನಿದಾನವಾಗಿ ಬದಲಾಗುತ್ತಿವೆ.

ಈ ಹಿನ್ನೆಲೆಯಲ್ಲಿ ದೇಶದ ಬೇರೆಡೆಗಳಲ್ಲಿ, ಮುಖ್ಯವಾಗಿ ನೀರಾವರಿ ಸೌಲಭ್ಯವಿರುವಲ್ಲೂ, ಔದ್ಯಮಿಕ ಕೇಂದ್ರಗಳ ಸುತ್ತುಮುತ್ತಲೂ ಹೊಸ ಕೃಷಿ ಸಂಬಂಧಗಳು ಬೆಳೆದಿವೆ. ಬಂಡವಾಳಶಾಹಿ ವ್ಯವಸ್ಥೆಯು ಬೆಳೆಯುತ್ತಿದ್ದಂತೆಯೇ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಮಂದಿ ಬಡ ರೈತರೂ, ಮಧ್ಯಮ ರೈತರೂ ಭೂಮಿಯನ್ನು ಕಳೆಕೊಂಡು ಭೂರಹಿತರಾಗುತ್ತಿದ್ದಾರೆ ದೇಶದಲ್ಲಿ ಭೂರಹಿತ ಕೃಷಿ ಕೂಲಿಗಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ದೊಡ್ಡ ಔದ್ಯಮ ಬಂಡವಾಳಗಾರರು ಹಾಗೂ ವ್ಯಾಪಾರಸ್ಥರು ಮತ್ತು ಎಲ್ಲಾ ರೈತಾಪಿ ಜನತೆಯೂ ಸೇರಿದಂತೆ ಕೃಷಿಕರ ಮಧ್ಯೆ ಸೆಣಸಾಟ ಪ್ರಾರಂಭವಾಗಿದೆ. ರೈತರ ಬೆಳೆಗೆ ಲಾಭದಾಯಕ ಬೆಲೆಯಂತಹ ಘೋಷಣೆಗಳು ಎಲ್ಲೆಲ್ಲೂ ಕೇಳಿಬಂದಿವೆ ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆಯ ಕಾರಣದಿಂದ ಗ್ರಾಮಾಂತರ ಪ್ರದೇಶಗಳು ತೀರಾ ಕಡೆಗಣಿಸಲ್ಪಟ್ಟಿವೆ.

ಕರ್ನಾಟಕ ರಾಜ್ಯದ ಪರಿಸ್ಥಿತಿ

ಕರ್ನಾಟಕ ಆರ್ಥಿಕ ಪರಿಸ್ಥಿತಿ ಮತ್ತು ಇಲ್ಲಿಯ ಭೂ ಸಂಬಂದಗಳನ್ನು ರಾಷ್ಟ್ರಮಟ್ಟದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಅದರೊಂದಿಗೆ ಈ ರಾಜ್ಯದಲ್ಲಿನ ಕೆಲವು ಬೆಳವಣಿಗೆಗಳನ್ನು ಗಮನಿಸಬೇಕಾಗುತ್ತದೆ ಈಗ ಕರ್ನಾಟಕವೆಂದು ಕರೆಯಲ್ಪಡುವ ಪ್ರದೇಶವು 1956ಕ್ಕೆ ಮೊದಲು ಹಳೆ ಮೈಸೂರು, ಮದ್ರಾಸು ಕರ್ನಾಟಕ, ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕ ಮತ್ತು ಕೊಡಗು ಎಂದು ವಿಂಗಡಿಸಲ್ಪಟ್ಟಿದ್ದು ಬೇರೆ ಬೇರೆ ಆಡಳಿತ ಮತ್ತು ಸರಕಾರಗಳ ಕೈಕೆಳಗಿದ್ದವು. ಭೂ ಸಂಬಂಧಗಳು ಇದೇ ರೀತಿ ಬೇರೆ ಬೇರೆ ಇತ್ತು ಎಂದು ನಾನು ಹೇಳುತ್ತಿಲ್ಲ. ಬದಲು ಈಗಿನ ರಾಜ್ಯದಲ್ಲಿ, ಹಿಂದೆ, ಈಗಿನ ಎಲ್ಲಾ ಪ್ರದೇಶಗಳನ್ನೂ ಜನತೆಯನ್ನೂ ಆವರಿಸಿ ವ್ಯಾಪಕವಾದ ಒಂದು ರೈತ ಚಳುವಳಿ ಬೆಳೆದಿಲ್ಲ. ಕೋಲಾರ ಜಿಲ್ಲೆಯಲ್ಲಿ ಇನಾಮುದಾರಿ ಪದ್ಧತಿಯ ವಿರುದ್ಧ, ಶಿವಮೊಗ್ಗ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾರವಾರ ಜಿಲ್ಲೆಗಳಲ್ಲಿ ಗೇಣಿ ರೈತರ ಹೋರಾಟ ಇವು ಸ್ಥಳೀಯ ಅಥವಾ ಪ್ರಾದೇಶಿಕವಾಗಿಯೇ ಇದ್ದುವು. ಹೋರಾಟಗಳು ಸ್ಥಳೀಯ ಅಥವಾ ಪ್ರಾದೇಶಿಕವಾಗಿ ಬೆಳೆದು ಬಂದುದಕ್ಕೆ ಬೇರೆ ಬೇರೆಯೇ ಕಾರಣಗಳಿರಬಹುದು. ಅವುಗಳಲ್ಲಿ (ಅ) ಭೂಸಂಬಂಧಗಳು ಸ್ಥಳದಿಂದ ಸ್ಥಳಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿರುವುದು (ಆ) ರಾಜ್ಯಮಟ್ಟದಲ್ಲಿ ರೈತರ ಬಲಿಷ್ಟ ಸಂಘಟನೆ ಇಲ್ಲದಿರುವುದು (ಇ) ರಾಜ್ಯದಲ್ಲಿ ಕಾರ್ಮಿಕ ವರ್ಗದ ಮತ್ತು ಎಡ ಶಕ್ತಿಗಳ ನಿಶ್ಶಕ್ತಿ, (ಈ) ಸರಕಾರದ ಪೊಳ್ಳು ಘೋಷಣೆಗಳು ಇವೇ ಮೊದಲಾದುವುಗಳಿರಬಹುದು.

ಈಗೀಗ ಮಾರುಕಟ್ಟೆ ಮತ್ತು ಹಣದ ಮೂಲಕ ಎಲ್ಲಾ ಪ್ರದೇಶದ ಎಲ್ಲಾ ರೈತರೂ ಒಂದೇ ಘೋಷಣೆಯ ಸುತ್ತ ಸಂಘಟಿತರಾಗುವ ಸಾಧ್ಯತೆ ಬಂದಿರುವುದರಿಂದಲೇ ಬೆಳದ ಬೆಳೆಗೆ ನ್ಯಾಯವಾದ ಮತ್ತು ಲಾಭದಾಯಕವಾದ ಬೆಲೆ ಸಿಗಬೇಕು ಎಂಬ ಬೇಡಿಕೆಯನ್ನು ಬೆಂಬಲಿಸಿ ರಾಜ್ಯದಾದ್ಯಂತ ಪ್ರತಿಭಟನೆ ಚಳುವಳಿಗಳು ಬೆಳೆದಿರುವುದನ್ನು ಕಾಣಬಹುದು. ಅಂದರೆ ಇತ್ತೀಚೆಗಿನ ದಿನಗಳಲ್ಲಿ ರಾಜ್ಯಮಟ್ಟದ ವ್ಯಾಪ್ತಿಯಿಂದ ರೈತ ಚಳುವಳಿ ಬೆಳೆಯುತ್ತಿದೆ ಎನ್ನಬಹುದು. ಗೇಣಿದಾರರು ಮತ್ತು ಭೂಸುಧಾರಣೆಗೆ ಸಂಬಂಧಿಸಿದ ಪ್ರಶ್ನೆಗಳು, ಅಥವಾ ಅಂತಹುದೇ ಇನ್ನಿತರ ಪ್ರಶ್ನೆಗಳು ರಾಜ್ಯವ್ಯಾಪಿಯಾಗಿ ಒಂದೇ ರೀತಿಯ ಪ್ರತಿಕ್ರಿಯೆ ಬೆಂಬಲವನ್ನು ಪಡೆಯುವುದು ಕಷ್ಟಸಾಧ್ಯ. ಅದಕ್ಕೆ ಕಾರಣ ಈ ಪ್ರಶ್ನೆಗಳು ಒಂದು ಪ್ರದೇಶದಲ್ಲಿರುವಷ್ಟು ಮುಖ್ಯವಾಗಿ ಇನ್ನೊಂದು ಪ್ರದೇಶದಲ್ಲಿ ಕಂಡು ಬರದಿರುವುದೇ ಆಗಿದೆ. ಕೃಷಿ ಕೂಲಿಕಾರರ ಬಗ್ಗೆ ಯೋಚಿಸೋಣ-ಭೂ ರಹಿತ ಕೃಷಿ ಕೂಲಿಕಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದ್ದರೂ ಭೂಮಿಯ ಕೇಂದ್ರೀಕರಣವಾಗದಿರುವುದು ಮತ್ತು ಸಾಕಷ್ಟು ಬೆಳವಣಿಗೆ ಕೃಷಿರಂಗದಲ್ಲಿ ಆಗದಿರುವುದರಿಂದ ಕೃಷಿ ಕಾರ್ಮಿಕರು ರಾಜ್ಯದಾದ್ಯಂತ ಒಂದೇ ತೆರನಾಗಿ ಸಂಘಟಿತ ಸಾಮಾಜಿಕ ಶಕ್ತಿಯಾಗಿ ಬರುವುದು ಸುಲಭ ಸಾಧ್ಯವಲ್ಲ. ಹೆಚ್ಚಿನ ಕೃಷಿ ಕೂಲಿಗಾರರಿಗೆ ವರ್ಷದಲ್ಲಿ ಮೂರು ನಾಲ್ಕು ತಿಂಗಳ ಕಾಲದಲ್ಲಿ ಮಾತ್ರ ಕೆಲಸ ಇದ್ದು ಉಳಿದ ಸಮಯದಲ್ಲಿ ಕೆಲಸವನ್ನು ಅರಸುತ್ತಾ ಅಲೆದಾಡುವುದು-ಇವೆಲ್ಲಾ ರಾಜ್ಯವಾಪಿಯಾಗಿ ಅವರನ್ನು ಒಂದೇ ಘೋಷಣೆಯಡಿಯಲ್ಲಿ ಸಂಘಟಿಸುವುದಕ್ಕೆ ಅಡ್ಡಿ ಮಾಡುತ್ತವೆ.

ಕೃಷಿ ಕ್ರಾಂತಿ

ದೇಶದಲ್ಲೂ, ರಾಜ್ಯದಲ್ಲೂ ಕೃಷಿ ರಂಗದಲ್ಲಿ ತೀವ್ರತರವಾದ ಕ್ರಾಂತಿಕಾರಿ ಬದಲಾವಣೆಗಳು ಆಗಿಲ್ಲವಾದರೆ, ಭೂ ಸಂಬಂಧಗಳು ಸಂಪೂರ್ಣವಾಗಿ ಬದಲಾಗಿ ಕೃಷಿಕ್ರಾಂತಿಯ ಮೂಲಕ ಗ್ರಾಮೀಣ ಪ್ರದೇಶವು ಸಮಗ್ರವಾಗಿ ಅಭಿವೃದ್ಧಿಯಾಗಿಲ್ಲವಾದರೆ ಔದ್ಯಮಿಕ ಬೆಳವಣಿಗೆಯೂ, ದೇಶದ ಪ್ರಗತಿಯೂ ಅಸಾಧ್ಯ) ನಮ್ಮ ದೇಶದ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗಬೇಕಾದರೆ ಉಳುವವನೇ ಹೊಲದೊಡೆಯನಾಗಬೇಕು. ಕೆಲಸ ಮಾಡದೆ ತಿನ್ನುವವನ ಭೂಮಿಯನ್ನು ಕೃಷಿ ಕೂಲಿಕಾರರಿಗೆ, ಭೂ ರಹಿತರಿಗೆ ಹಂಚಬೇಕು. ಸ್ವಂತ ದುಡಿಯಲು ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಒಬ್ಬ ವ್ಯಕ್ತಿ ಅಥವಾ ಕುಟುಂಬ ಇಟ್ಟುಕೊಳ್ಳಬೇಕು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇದು ಕೇವಲ ಪ್ರಚಾರದ ಘೋಷಣೆಯಾಗಬಲ್ಲದಷ್ಟೆ. ಈ ಘೋಷಣೆಯು ಕಾರ್ಯರೂಪಕ್ಕೆ ಬರಬೇಕಾದರೆ ರೈತ-ಕಾರ್ಮಿಕರ ಸಂಘಟನೆಯೂ, ಎಡಶಕ್ತಿಗಳೂ ಸಾಕಷ್ಟು ಬಲಿಷ್ಠವಾಗಬೇಕು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವ, ಅಂದರೆ ಭೂ ಸಂಬಂಧಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತಂದು ಹಳೆಯ ಊಳಿಗ ಮಾನ್ಯ ಪದ್ಧತಿಯ ಅವಶೇಷಗಳನ್ನು ಸಂಪೂರ್ಣ ನಾಶ ಮಾಡುವ ಪರಿಸ್ಥಿತಿಯನ್ನುಂಟು ಮಾಡಿದಾಗ ಅದು ಸಾಧ್ಯವಾಗಬಲ್ಲದು.

ಈ ದೃಷ್ಟಿಯಿಂದ ಬಡರೈತ ಮತ್ತು ಕೃಷಿ ಕೂಲಿಗಾರರು ಒಂದಾಗಿ ಮಧ್ಯ ರೈತರನ್ನು ಸ್ನೇಹಿತರನ್ನಾಗಿಸಿಕೊಂಡು ಗ್ರಾಮಾಂತರ ಪ್ರದೇಶದಲ್ಲಿ ವರ್ಗ ಹೋರಾಟವನ್ನು ಬೆಳೆಸಬೇಕು. ಕಾರ್ಮಿಕ ವರ್ಗ ಅದಕ್ಕೆ ಬೆಂಬಲವೀಯಬೇಕು, ಈ ಹೋರಾಟದಲ್ಲಿ ಶ್ರೀಮಂತ ರೈತರದ್ದೂ ಬೆಂಬಲ ಸಿಗುವುದು ಸಾಧ್ಯವಿದೆ. ಅದನ್ನೂ ಪಡೆಯಬೇಕು. ಇನ್ನೊಂದೆಡೆ ಕೃಷಿ ಕೂಲಿಗಾರರನ್ನು ಸಂಘಟಿಸಿ, ಬದಲಾಗುತ್ತಿರುವ ಭೂಸಂಬಂಧದ ಹಿನ್ನೆಲೆಯನ್ನು ಅರ್ಥಮಾಡಿ ಅವರ ವರ್ಗ ಹೋರಾಟವನ್ನೂ ಬೆಳೆಸಬೇಕು. ಈ ದೃಷ್ಟಿಯನ್ನಿರಿಸಿ, ರೈತ ಮತ್ತು ಕೃಷಿ ಕೂಲಿಗಾರರ ಸಂಘಟಿತ ಹೋರಾಟವನ್ನೂ ಬೆಳೆಸುವ ಪ್ರಯತ್ನವು ಸಿಪಿಐ (ಎಂ) ನೇತೃತ್ವದ ಕರ್ನಾಟಕ ಪ್ರಾಂತ ರೈತ ಸಂಘದಿಂದ ಒಂದೆಡೆ ನಡೆಯುತ್ತಿದ್ದರೆ ಇನ್ನೊಂದೆಡೆ ಭೂಮಾಲೀಕರು ಮತ್ತು ಶ್ರೀಮಂತ ರೈತರನ್ನು ಸಂಘಟಿಸುವ ಪ್ರಯತ್ನವೂ ನಡೆದಿದೆ. ಶ್ರೀಮಾನ್ ರುದ್ರಪ್ಪನಂತಹವರ ನೇತೃತ್ವದ ಚಳುವಳಿ ಮತ್ತು ಸಂಘಟನೆಯು ಕೊನೆಯದಕ್ಕೆ ಉದಾಹರಣೆ.

ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ

ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಮತ್ತು ಲಾಭದಾಯಕ ಬೆಲೆ ಬೇಕು, ರೈತರ ಸಾಲಗಳು ರದ್ದಾಗಬೇಕು, ನೀರಾವರಿ ತೆರಿಗೆ ರದ್ದಾಗಬೇಕು ಎಂಬಿತ್ಯಾದಿ ಬೇಡಿಕೆಗಳೊಂದಿಗೆ ಇತ್ತೀಚೆಗಿನ ದಿನಗಳಲ್ಲಿ ರಾಜ್ಯದಲ್ಲಿ (ರಾಷ್ಟ್ರದಲ್ಲೂ) ರೈತ ಚಳುವಳಿ ಬೆಳೆದು ಬಂದಿದೆ. ಮಲಪ್ರಭಾ ರೈತ ಸಮನ್ವಯ ಸಮಿತಿಯು ಮುಂದಿಟ್ಟ ಬೇಡಿಕೆಗಳು, ಕೋಲಾರ ಜಿಲ್ಲಾ ರೈತ ಹೋರಾಟ ಸಮಿತಿಯ ಬೇಡಿಕೆಗಳು, ಸಿಪಿಐ (ಎಂ) ನೇತೃತ್ವದ ಕರ್ನಾಟಕ ಪ್ರಾಂತ ರೈತ ಸಂಘವು ಮುಂದಿಟ್ಟ ಬೇಡಿಕೆಗಳು, ನಾಲ್ಕು ಪಕ್ಷಗಳು (ಸಿ.ಪಿ.ಐ. (ಎಂ), ಸಿ ಪಿ.ಐ, ಅರಸು ಕಾಂಗ್ರೆಸ್. ಲೋಕದಳ) ರೂಪಿಸಿಕೊಂಡಿದ್ದ ರೈತ ಕಾರ್ಮಿಕ ಹೋರಾಟ ಸಮಿತಿಯು ಮುಂದಿಟ್ಟ ಬೇಡಿಕೆ-ಇದನ್ನೆಲ್ಲಾ ಸೂಕ್ಷ್ಮವಾಗಿ ನೋಡಿದರೆ ಭೂರಹಿತ ಕೃಷಿ ಕೂಲಿಗಾರರ ಮತ್ತು ಬಡ ರೈತರ ಬೇಡಿಕೆಗಳು ಅವುಗಳಲ್ಲಿ ಸೇರಿರುವದು ಸ್ಪಷ್ಟವಾಗಿ ಕಂಡು ಬರುತ್ತದೆ. ಶ್ರೀಮಂತ ರೈತರೂ ಸೇರಿದಂತೆ ಎಲ್ಲಾ ರೈತರಿಗೂ ಸಂಬಂಧಿಸಿರುವ ಬೇಡಿಕೆಗಳಿಗೆ ಬೆಂಬಲ ಕೊಡುವುದರೊಂದಿಗೆ ಹೋರಾಟದ ದಿಕ್ಕನ್ನು ಬದಲಾಯಿಸುವ ದೃಷ್ಟಿ ಅದರಲ್ಲಿ ಅಡಕವಾಗಿದೆ. ವ್ಯಾಪಕವಾದ ಚಳುವಳಿಯು ಬೆಳೆಯುತ್ತಿರುವಾಗ ಅದಕ್ಕೆ ಎಡ ಮತ್ತು ಪ್ರಗತಿಶೀಲ ತಿರುವನ್ನು ಇತ್ತು, ಗ್ರಾಮೀಣ ಪ್ರದೇಶದಲ್ಲಿ ಹಳ್ಳಿಯ ಬಡವರ ಸಂಘಟನೆ ಬೆಳೆಸುವತ್ತ ಅದನ್ನು ಉಪಯೋಗಿಸುವ ದೃಷ್ಟಿಯಿದೆ. ದೊಡ್ಡ ಔದ್ಯಮಿಕ ಬಂಡವಾಳಗಾರ ಮತ್ತು ವ್ಯಾಪಾರಸ್ಥರ ವಿರುದ್ಧ ರೈತರೆಲ್ಲಾ ಸಿಟ್ಟಾಗಿರುವಾಗ, ಸರ್ಕಾರದ ವಿರೋಧ ಮನೋಭಾವನೆ ಮತ್ತು ಐಕ್ಯತೆ ಬೆಳೆದು ಬರುವಾಗ ಅದನ್ನು ಬೆಳೆಸುವುದು ಹಾಗೂ ಸರಿಯಾದ ತಿರುವನ್ನು ಕೊಡುವುದು ಅವಶ್ಯವಿದೆ.

ಆದರೆ ಶ್ರೀ ಎಚ್. ಎಸ್. ರುದ್ರಪ್ಪ ಮತ್ತು ಸಂಗಡಿಗರು ಮುಂದಿಟ್ಟ ಬೇಡಿಕೆಗಳು ಭೂ ಮಾಲೀಕ ಮತ್ತು ಶ್ರೀಮಂತ ರೈತರ ಪರವಾಗಿಯೇ ಇದ್ದುದು ಸ್ಪಷ್ಟ. ಕಾರ್ಮಿಕ ವರ್ಗ ಮತ್ತು ರೈತರನ್ನು ಪರಸ್ಪರ ಎತ್ತಿಕಟ್ಟುವುದು, ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಬರುತ್ತಿರುವ, ಐಕ್ಯ ಚಳುವಳಿಯನ್ನು ತುಂಡು ಮಾಡುವುದು, ಪಟ್ಟಣಿಗರು ಮತ್ತು ಹಳ್ಳಿಯವರನ್ನು ಪರಸ್ಪರ ಎತ್ತಿ ಕಟ್ಟುವುದೇ ಈ ಎಲ್ಲಾ ಉದ್ದೇಶಗಳು ಇವೆ ಎಂಬುದು ಅವರ ಬೇಡಿಕೆಗಳು ಮತ್ತು ಮಾತುಗಳಿಂದ ಸ್ಪಷ್ಟವಾಗಿದೆ. ಸಿ ಪಿ ಐ (ಎಂ) ಮತ್ತು ಅದರ ರೈತ ಸಂಘಟನೆಯು ಸ್ವತಂತ್ರವಾಗಿ ಮತ್ತು ಜಂಟೀಯಾಗಿ ನಡೆಸಿರುವ ಕಾರ್ಯಕ್ರಮಗಳು ಹಾಗೂ ನಾಲ್ಕು ಪಕ್ಷಗಳ ನೇತೃತ್ವದಲ್ಲಿ ನಡೆದ ಚಾರಿತ್ರಿಕ ರೈತ ಜಾತಾಗಳು ರುದ್ರಪ್ಪ ಮತ್ತು ಅವರ ಸಂಗಡಿಗರ ವಿಭಜನಾ ತಂತ್ರಗಳಿಗೆ ಉತ್ತರ ನೀಡಿವೆ. ಕಳೆದ ಎರಡು ವರ್ಷಗಳ ಬೆಳವಣಿಗೆ ಮತ್ತು ಅನುಭವಗಳನ್ನು ಉಪಯೋಗಿಸಿಕೊಂಡು ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ರೈತರ ಮತ್ತು ಕೃಷಿ ಕೂಲಿಗಾರರ ಸಂಘಟನೆಯ ಪ್ರಯತ್ನ ಮುಂದುವರೆದಿದೆ. ಸಿ. ಪಿ. ಐ. (ಎಂ) ಮತ್ತು ಅದರ ರೈತ ಸಂಘಟನೆಗಳು ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿವೆ. ಉಳಿದವರ ಸಂಘಟನೆಯ ಪರಿಸ್ಥಿತಿಯ ಬಗ್ಗೆ ನಾನು ಅಷ್ಟಾಗಿ ಹೇಳುವುದು ಸಾಧ್ಯವಿಲ್ಲ. ಶ್ರೀ ರುದ್ರಪ್ಪನಂತಹವರೂ ತಮ್ಮ ಸಂಘಟನಾ ಪ್ರಯತ್ನಗಳನ್ನು ಮುಂದುವರೆಸುತ್ತಿದ್ದಾರೆ.

ತಾತ್ವಿಕ ಪ್ರಶ್ನೆ

ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯಂತಹ ಬೇಡಿಕೆಗಳು ಕೇವಲ ಶ್ರೀಮಂತ ರೈತರು, ಭೂಮಾಲೀಕರಿಗೆ ಅನುಕೂಲವಾಗಿರುವುದರಿಂದ ಅದಕ್ಕೆ ಬೆಂಬಲ ಕೊಡುವುದು ಸರಿ ಅಲ್ಲ ಎಂಬ ವಾದ ವಿವಾದವೆದ್ದಿದೆ. ಅದಕ್ಕೆ ಬೆಂಬಲವಿತ್ತರೆ ಬಡ ರೈತರು ಮತ್ತು ಕೃಷಿ ಕೂಲಿಗಾರರು ದೂರ ಹೋಗುತ್ತಾರೆ ಎಂಬ ವಾದ ಬೇರೆ ಇದೆ.

ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಬೇಕು ಎಂಬ ಬೇಡಿಕೆಗೆ ಬಡ ರೈತರು, ಮಧ್ಯಮ ರೈತರು ಬೆಂಬಲವೀಯುತ್ತಾರೆ. ಏಕೆಂದರೆ, ಅವರಲ್ಲಿ ಮಾರುಕಟ್ಟೆಗಾಗಿ ತಯಾರಿಸಿದ ಹೆಚ್ಚಿನ ಉತ್ಪನ್ನ ಇಲ್ಲವಾದರೂ, ಇರುವುದನ್ನು ಮಾರುತ್ತಾರೆ. ಮತ್ತೆ ಪುನಃ ಮಾರುಕಟ್ಟೆಯಿಂದ ಅವನ್ನು ಕ್ರಯಕ್ಕೆ ಪಡೆಯುತ್ತಾರೆ" ಹಣದ ಚಲಾವಣೆ ಮತ್ತು ಮಾರುಕಟ್ಟೆಯ ವ್ಯವಸ್ಥೆಯಿಂದಲಾಗಿ ಬಡ ಮತ್ತು ಸಣ್ಣ ರೈತರೂ ಈ ಬೇಡಿ

(7ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ:

ಕರ್ನಾಟಕದಲ್ಲಿ ಭೂಸುಧಾರಣೆ

—ಆರ್. ಚಂದ್ರ

ದಕ್ಷಿಣ ಕನ್ನಡ ಜಿಲ್ಲೆ :

ರಾಜ್ಯದ ಒಟ್ಟು 284 ಟ್ರಿಬ್ಯೂನಲ್‌ಗಳಲ್ಲಿ ಈ ಜಿಲ್ಲೆಯಲ್ಲಿ 55 ಟ್ರಿಬ್ಯೂನಲ್‌ಗಳಿವೆ. ಭೂಸ್ವಾಧೀನತೆಗಾಗಿ ಗೇಣಿದಾರರಿಂದ ಈ ಟ್ರಿಬ್ಯೂನಲ್‌ಗಳಿಗೆ 1,79,839 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ 1,78,466 ಅರ್ಜಿಗಳು ಇತ್ಯರ್ಥವಾಗಿದ್ದು, 1,39,324 ಅರ್ಜಿಗಳು ಒಕ್ಕಲುಗಳ ಪರವಾಗಿವೆ ಎಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ಅನೇಕರಿಗೆ ಅನ್ಯಾಯವಾಗಿದೆ. ಅಗಸ್ಟ್ 81ರಲ್ಲಿ 16300 ಅರ್ಜಿಗಳು ಇತ್ಯರ್ಥವಾಗಿದ್ದರೆ, ಸೆಪ್ಟಂಬರ್ 81ರ ಒಂದೇ ವಾರದಲ್ಲಿ 20000 ಅರ್ಜಿಗಳು ತೀರ್ಮಾನವಾದವು! ಅನೇಕ ತೀರ್ಮಾನಗಳು ನಿಜವಾದ ಗೇಣಿದಾರರ ಪರವಾಗಿ ಆಗಲಿಲ್ಲ. ಬದಲು ಭೂಮಾಲೀಕರ, ದಲ್ಲಾಳಿಗಳ, ಟ್ರಿಬ್ಯೂನಲ್ ಸದಸ್ಯರ, ರಾಜಕೀಯ ಪುಢಾರಿಗಳ, ಬೇನಾಮಿ ಗೇಣಿದಾರರ ಪರವಾಗಿ ಇತ್ಯರ್ಥವಾಗಿರುವುದೂ ಉಂಟು. ಅವಸರದಿಂದಾಗಿ ಅಧಿಕಾರಿಗಳಿಗೆ, ಮಧ್ಯವರ್ತಿಗಳಿಗೆ ಹಣ ಮಾಡಲು ಅವಕಾಶ ಸಿಕ್ಕಿದಂತಾಯಿತು. ಟ್ರಿಬ್ಯೂನಲ್ ತೀರ್ಮಾನಗಳು ಅರ್ಜಿದಾರರ 'ಪರ' ಅಥವಾ 'ವಿರೋಧ' ಮಾತ್ರ ದಾಖಲೆ ಮಾಡಿಕೊಳ್ಳುವುದು. ಪರ–ವಿರೋಧವಾಗಿ ತೀರ್ಮಾನಿಸಲು ತಾರ್ಕಿಕ ಕಾರಣಗಳ ವಿವರಣೆಗಳು ತೀರ್ಪುಗಳಲ್ಲಿ ಇರುವುದಿಲ್ಲ. ಆದುದರಿಂದ ತೀರ್ಪುಗಳ ವಿರುದ್ಧ ಕೋರ್ಟಿಗೆ ಅಪೀಲು ಮಾಡಲು ಕಷ್ಟ. ಟ್ರಿಬ್ಯೂನಲ್‌ಗಳಿಗೆ ರೆವಿನ್ಯೂ, ಸಿವಿಲ್, ಕ್ರಿಮಿನಲ್ ಕೋರ್ಟುಗಳ ಅಧಿಕಾರ ವ್ಯಾಪ್ತಿ ಇದ್ದರೂ, ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಕ್ಷಿದಾರರನ್ನು ವಿಚಾರಿಸಿ, ಸಂಬಂಧಪಟ್ಟ ಭೂಮಿಯನ್ನು ಸ್ಥಳದಲ್ಲೇ ಪರೀಕ್ಷಿಸಿ ತೀರ್ಪು ಕೊಡುವ ಬದಲು ರಾಜ್ಯೋತ್ಸವ ದಿನವಾದ 1–11–81 ರ ಒಳಗಾಗಿ ಎಲ್ಲಾ ಅರ್ಜಿಗಳು ಇತ್ಯರ್ಥವಾಗಬೇಕೆಂಬ ಒಂದೇ ಗುರಿಯಿಂದ ಅವಸರಗೊಳಿಸಿ ಅಪಾರ ಅನ್ಯಾಯವಾಗಿದೆ. ಇತ್ತೀಚೆಗೆ ಇದರ ವಿರುದ್ಧ ಸಿ. ಪಿ. ಐ. (ಎಂ) ಮತ್ತು ರೈತ ಸಂಘದ ನೇತೃತ್ವದಲ್ಲಿ ಸುಳ್ಯದಲ್ಲಿ 23 ದಿನಗಳ ತೀವ್ರ ಹೋರಾಟ ನಡೆದಿದೆ. ಜಿಲ್ಲೆಯಾದ್ಯಂತ ಪ್ರತಿಭಟನೆಯನ್ನು ಸಂಘಟಿಸಲಾಗಿದೆ.

ಟ್ರಿಬ್ಯೂನಲ್ ಸದಸ್ಯರ ನೇಮಕದಲ್ಲಿಯೂ ಗುಂಪುಗಾರಿಕೆ ಪೈಪೋಟಿ. ಭೂ ಸಂಬಂಧದ ಯಾವ ಅನುಭವ ಇಲ್ಲದವರನ್ನೂ ಟ್ರಿಬ್ಯುನಲ್ ಸದಸ್ಯರನ್ನಾಗಿ ನೇಮಕ ಮಾಡಿದ ಉದಾಹರಣೆಗಳು ಅನೇಕ ಇವೆ.

ಗೇಣಿದಾರರ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಮಾಡಿದ ಅವಸರದಷ್ಟೇ ಅವರಿಗೆ ಭೂಸ್ವಾಧೀನತಾ ಪಟ್ಟಾ ಕೊಡಲಿಕ್ಕೆ ಅವಸರ ಮಾಡಲಾಗುತ್ತಿಲ್ಲ! ಪರಿಣಾಮವಾಗಿ ಗೇಣಿದಾರರ ಪರವಾಗಿ ಅರ್ಜಿಗಳು ತೀರ್ಮಾನಗೊಂಡರೂ, ಪಟ್ಟಾ ಸಿಗದೆ ಅಂತಹ ಗೇಣಿದಾರರಿಗೆ ವ್ಯವಸಾಯ ಮಾಡಲು ಸಾಲ, ಸಹಾಯ ಸಿಗುವುದು ಕಷ್ಟನಾಗುತ್ತಿದೆ. ಆಗಸ್ಟ್ 1981ರ ವರೆಗೆ ಕೇವಲ 69000 ಗೇಣಿದಾರರಿಗೆ ಪಟ್ಟಾ ಸಿಕ್ಕಿದೆ. ನಂತರ 40,000 ಅರ್ಜಿಗಳು ತೀರ್ಮಾನಗೊಂಡರೂ, ಪಟ್ಟಾಕೊಡುವ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ.

ನಮ್ಮ ೩೧-೧-೮೨ ರ ಸಂಚಿಕೆಯಲ್ಲಿ ಕರ್ನಾಟಕದಲ್ಲಿ ೧೯೬೦ ಮತ್ತು ೧೯೭೦ ರ ದಶಕಗಳಲ್ಲಿ ಜ್ಯಾರಿಗೊಳಿಸಿದ ಭೂಸುಧಾರಣಾ ಕಾಯಿದೆಗಳ ವರ್ಗವೈಶಿಷ್ಟ್ಯಗಳನ್ನು ಪರಿಶೀಲಿಸಿದ್ದೆವು. ಆ ಕಾಯಿದೆಗಳು ಮೂಲತ: ದೊಡ್ಡ ಭೂಮಾಲೀಕರ ಮತ್ತು ಶ್ರೀಮಂತ ರೈತರ ಪರವಾಗಿಯೇ ಇವೆ ಎಂದೂ, ಬಡರೈತರಾಗಲೀ, ಭೂಹೀನ ಕೃಷಿ ಕಾರ್ಮಿಕರಾಗಲೀ ಅವುಗಳಿಂದ ಹೆಚ್ಚು ಪ್ರಯೋಜನ ಪಡೆಯಲಾರರೆಂದೂ ಕಂಡುಕೊಂಡೆವು. ಅವರು ಅಲ್ಪ–ಸ್ವಲ್ಪ ಪ್ರಯೋಜನ ಪಡೆಯಬಹುದಾಗಿದ್ದರೂ, ರಾಜ್ಯದಭೂಸುಧಾರಣಾ ಕಾಯಿದೆಗಳನ್ನು ಕಾರ್ಯಗತಗೊಳಿಸುವುದರಲ್ಲಿಯೂ ಗ್ರಾಮೀಣ ಪ್ರತಿಷ್ಠಿತ ವರ್ಗದವರಪರವಾಗಿಯೇ ಪಕ್ಷಪಾತವಾಗಿರುವುದನ್ನು ಈ ಸಂಚಿಕೆಯಲ್ಲಿ ವಿವರಿಸಲಾಗಿದೆ.

ಬಡ ಗೇಣಿದಾರರ ಪರವಾಗಿ ತೀರ್ಮಾನವಾದ ಅಂಕೆಸಂಖ್ಯೆಯನ್ನು ಓದುವಾಗ ಒಂದು ವಿಷಯವನ್ನು ಗಮನದಲ್ಲಿರಿಸಬೇಕು. ಅದೇನೆಂದರೆ, ಗೇಣಿದಾರರ ಪರವಾಗಿರುವ ತೀರ್ಮಾನಗಳನ್ನು ಮಾಡಿರುವಾಗ, ಉಳುಮೆಮಾಡುತ್ತಿದ್ದ ಎಲ್ಲ ಭೂಮಿಯನ್ನು ಅವನಿಗೇ ಕೊಟ್ಟಿಲ್ಲ ಎಂಬುದನ್ನು.

ಶಿವಮೊಗ್ಗ :

ಈ ಜಿಲ್ಲೆಯ 21 ಟ್ರಿಬ್ಯುನಲ್‌ಗಳಲ್ಲಿ 59,566 ಅರ್ಜಿಗಳು ಗೇಣಿದಾರರಿಂದ ಬಂದಿದ್ದು ಸೆಪ್ಟೆಂಬರ್ 81ರ ಅಂತ್ಯದಲ್ಲಿ ಕೇವಲ 7,167 ಅರ್ಜಿಗಳು ತೀರ್ಮಾನವಾಗಲು ಉಳಿದಿದ್ದವು. ಆದರೆ ಹೆಚ್ಚಿನ ಗೇಣಿದಾರರಿಗೆ ಸ್ವಾಧೀನತಾ ಪತ್ರ ಇದುವರೆಗೂ ಸಿಗಲಿಲ್ಲ. ಇಲ್ಲಿನ ಟ್ರಿಬ್ಯೂನಲ್ ಸದಸ್ಯರೊಳಗೆ ತೀವ್ರ ಕಚ್ಚಾಟ–ಗುಂಪುಗಾರಿಕೆ. ಕಾಗೋಡು ತಿಮ್ಮಪ್ಪ ಮತ್ತು ಬಂಗಾರಪ್ಪ ಇವರಿಬ್ಬರ ಪರ–ವಿರೋಧವಾಗಿ ರಾಜಕೀಯ ಕಚ್ಚಾಟಗಳು ಲ್ಯಾಂಡ್ ಟ್ರಿಬ್ಯೂನಲ್‌ಗಳ ಕೆಲಸ ಕಾರ್ಯಗಳ ಮೇಲೂ ಬಹಳ ಪ್ರಭಾವ ಬೀರಿವೆ. ರೈತರಲ್ಲಿ ತೀವ್ರ ಅಸಮಾಧಾನ ತಾಂಡವವಾಡುತ್ತಿದೆ. ಭೂ ಸ್ವಾಧೀನತೆ ಉಳಿಸಿಕೊಳ್ಳಲು ಭೂ ಮಾಲೀಕರ ವರ್ಚಸ್ಸು ಬಹಳವಾಗಿದೆ. ಪರಿಣಾಮವಾಗಿ 2.33 ಲಕ್ಷ ಹೆಚ್ಚುವರಿ ಭೂಮಿಗೆ ಸಂಬಂಧಿಸಿದ 7224 ಭೂಮಿತಿ ಅರ್ಜಿಗಳಲ್ಲಿ ಕೇವಲ 4703 ಅರ್ಜಿಗಳನ್ನು ಟ್ರಿಬ್ಯೂನಲ್‌ಗಳು ತೀರ್ಮಾನಿಸಿವೆ. ಆದರೆ ಭೂಮಿ ಮರುವಿತರಣೆ ಮಾಡಿ ಪಟ್ಟಾ ಕೊಡುವ ಕೆಲಸ ಸ್ಥಗಿತಗೊಂಡಿದೆ. ಉಳಿದ 2571 ಅರ್ಜಿಗಳು 1 ಲಕ್ಷ ಎಕರೆ ಹೆಚ್ಚುವರಿ ಭೂಮಿಗೆ ಸಂಬಂಧಿಸಿದವುಗಳು. ಇವುಗಳು ಇನ್ನು ಮುಂದೆ ಇತ್ಯರ್ಥವಾಗುವದೂ ಕಷ್ಟ. ಇಷ್ಟರಲ್ಲಿಯೇ ಭೂ ಮಾಲಿಕರು ಹೆಚ್ಚುವರಿ ಭೂಮಿಯನ್ನು ತಮ್ಮ ಪ್ರಾಯಸ್ಥ ಮಕ್ಕಳಿಗೆ-ಸಂಬಂಧಿಕರಿಗೆ ಬಿಟ್ಟುಕೊಟ್ಟಿರಬಹುದು. ಹೈಕೋರ್ಟಿನ ತೀರ್ಮಾನಗಳಲ್ಲಿಯೂ ಹೆಚ್ಚುವರಿ ಭೂಮಿಯನ್ನು ಪಡೆಯಲು ಪ್ರಾಯಸ್ಥ ಮಕ್ಕಳು ಅರ್ಹರಾಗುವರು.

ಟ್ರಿಬ್ಯೂನಲ್ ನಿರ್ಣಯಗಳು ಹೆಚ್ಚಾಗಿ ರಾಜಕೀಯ ನಿರ್ಣಯಗಳೇ ಆಗಿರುವುವು! ಇವುಗಳು ಸಾಕ್ಷಿಗಳನ್ನಾಗಲೀ, ದಾಖಲೆಗಳನ್ನಾಗಲೀ ಅನುಸರಿಸುವುದಿಲ್ಲ. ಎಲ್ಲವೂ ಟ್ರಿಬ್ಯೂನಲ್‌ಗಳ ಹೊರಗೇ ನಿರ್ಣಯವಾಗುವುವು! ಒಬ್ಬೊಬ್ಬ ಟ್ರಿಬ್ಯೂನಲ್ ಸದಸ್ಯನಿಗೆ ಇಷ್ಟಿಷ್ಟು ಅರ್ಜಿಗಳನ್ನು ತನಗೆ ಇಷ್ಟ ಬಂದಂತೆ ನಿಶ್ಚೈಸಬಹುದು. ದಾಖಲೆಗಳು ಇಲ್ಲವಾದರೆ, ಧರ್ಮಸ್ಥಳ ಮಂಜುನಾಥನ ಮೇಲೆ ಆಣೆ ಹಾಕಿ ಹೇಳಿಕೆ ನೀಡಿದಂತಾಯಿತು! ಒಂದು ಕಾಲದಲ್ಲಿ ಸಮಾಜವಾದಿ ಎಂದು ಹೆಸರುವಾಸಿಯಾದ ಈಗ ಗುಂಡೂರಾಯರ ಮಂತ್ರಿಮಂಡಲದಲ್ಲಿರುವ ಕಾಗೋಡು ತಿಮ್ಮಪ್ಪನವರೂ ಇದರಲ್ಲಿ ಶಾಮೀಲಾಗಿದ್ದಾರೆ! ಟ್ರಿಬ್ಯೂನಲ್ ನಿರ್ಣಯಗಳು, ಅರ್ಜಿದಾರರು ಆಳುವ ಪಕ್ಷಕ್ಕೆ-ಅವರ ಮಧ್ಯವರ್ತಿಗಳಾದ ಟ್ರಿಬ್ಯೂನಲ್ ಸದಸ್ಯರ ಪರ-ವಿರೋಧವಾಗಿರುವ ಮೇಲೆ ಅವಲಂಬಿಸಿದೆ. ಇಂತಹ ಅನ್ಯಾಯ, ಅತ್ಯಾಚಾರಗಳ ವಿರುದ್ಧ ಭದ್ರಾವತಿ, ಚನ್ನಗಿರಿ, ಸಾಗರ, ತೀರ್ಥಹಳ್ಳಿ, ಸೊರಬ ತಾಲ್ಲೂಕುಗಳಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ.

ಚಿಕ್ಕಮಗಳೂರು ಜಿಲ್ಲೆ :

ಈ ಜಿಲ್ಲೆಯಲ್ಲಿ ಇಂದಿರಾಗಾಂಧಿ-ಗುಂಡೂರಾವ್ ಕಂಪನಿಯ ಸಮಾಜವಾದಿ ಮಾದರಿ ಸಮಾಜ ಚೆನ್ನಾಗಿ ನಡೆಯುತ್ತ ಬಂದಿದೆ! ಇಲ್ಲಿನ ಶ್ರೀಮಂತ ಎಸ್ಟೇಟುದಾರರು ಭೂ ಸುಧಾರಣಾ ಕಾಯಿದೆಯಿಂದ ವಿನಾಯಿತಿ ಹೊಂದಿರುವರು. ಇವರು ಇತ್ತೀಚಿಗಿನ ವರ್ಷಗಳಲ್ಲಿ ಇನ್ನಷ್ಟು ಭೂಮಿಯನ್ನು ಅಕ್ರಮವಾಗಿ ಆಕ್ರಮಿಸುತ್ತಿದ್ದಾರೆ. ಸರ್ಕಾರ ಆಡಳಿತ ಈ ವಿಷಯದಲ್ಲಿ ನಿಷ್ಕ್ರೀಯವಾಗಿರುವುದೇ ಅಲ್ಲದೆ, ಮುಖ್ಯ ಮಂತ್ರಿ ಗುಂಡೂರಾವ್ ಎಸ್ಟೇಟುದಾರರಿಗೆ ಹೆಚ್ಚು ಭೂಮಿ ಬೇಕಾದರೆ ರಾಜಕೀಯ ಧುರೀಣರೊಂದಿಗೆ ಸಂಬಂಧವಿಟ್ಟುಕೊಳ್ಳಲಿ ಎಂದು ನೇರ ಸಲಹೆ ನೀಡಿದ್ದಾರೆ. ಒಂದು ಸಮೀಕ್ಷೆಯಂತೆ, ಎಸ್ಟೇಟುದಾರರು ಅಕ್ರಮವಾಗಿ ಆಕ್ರಮಿಸಿರುವ ಭೂಮಿಯು 3 ಲಕ್ಷ ಎಕರೆಗಳಷ್ಟಾಗಿದೆ. ಭೂಮಿತಿ ಕಾಯಿದೆಯಂತೆ, ಜಿಲ್ಲೆಯಲ್ಲಿ 1.45 ಲಕ್ಷ ಹೆಚ್ಚುವರಿ ಭೂಮಿಗೆ ಸಂಬಂಧಿಸಿದ 2038 ಅರ್ಜಿಗಳು ಟ್ರಿಬ್ಯುನಲ್‌ಗಳಿಗೆ ಬಂದಿದ್ದವು. ಆದರೆ, ಈ ತನಕ ಒಂದು ಸಾವಿರ ಎಕರೆ ಹೆಚ್ಚುವರಿ ಭೂಮಿ ಮಾತ್ರ ವಿತರಣೆಗೆ ಸಿಕ್ಕಿದೆ. ನರಸಿಂಹರಾಜಪುರದಲ್ಲಿ 11572 ಎಕರೆ ಹೆಚ್ಚುವರಿ ಭೂಮಿಗೆ ಸಂಬಂಧಿಸಿ 302 ಭೂ ಮಾಲೀಕರು ಅರ್ಜಿ ಹಾಕಿದ್ದರೆ, ಟ್ರಿಬ್ಯೂನಲ್ ತೀರ್ಮಾನಗಳಂತೆ ಕೇವಲ 136 ಎಕರೆ ಹೆಚ್ಚುವರಿ ಭೂಮಿ ಮರು ವಿತರಣೆಗೆ ಸಿಗುವಂತಾಯಿತು. ಹಾಗೆಯೇ ಕಡೂರಿನಲ್ಲಿ 7382 ಎಕರೆ ಹೆಚ್ಚುವರಿಗೆ ಸಂಬಂಧಿಸಿದ 152 ಅರ್ಜಿಗಳನ್ನು ಪರಿಶೀಲಿಸಿ ಕೇವಲ 206 ಎಕರೆ ಹೆಚ್ಚುವರಿ ಭೂಮಿ ಮರು ವಿತರಣೆಗೆ ಸಿಗುವಂತಾಯಿತು. ಮಂತ್ರಿ ಮಲ್ಲಿಕಾರ್ಜುನ ಖರ್ಗೆ ಹೇಳುತ್ತಾರೆ. 'ಜಿಲ್ಲೆಯಲ್ಲಿ 5ಲಕ್ಷ ಹೆಚ್ಚುವರಿ ಭೂಮಿ ಮರು ವಿತರಣೆಗೆ ಸಿಗುವದು ಎಂದು—ಎಲ್ಲಿಂದ'? ಅವರಿಗೇ ಗೊತ್ತು. ಚಿಕ್ಕಮಗಳೂರಿನಂತಹ ಶ್ರೀಮಂತ ಭೂ ಮಾಲೀಕರಿರುವ ಜಿಲ್ಲೆಯಲ್ಲಿಯೇ ಕೇವಲ 1000 ಎಕರೆಗಳಷ್ಟೇ ಹೆಚ್ಚುವರಿ ಭೂಮಿ ಸಿಗುವುದಾದರೆ ರಾಜ್ಯದ ಇತರ ಜಿಲ್ಲೆಗಳಲ್ಲಿನ ಸ್ಥಿತಿ ಏನು? ಈ ಜಿಲ್ಲೆಯಲ್ಲಿ 19533 ಅರ್ಜಿಗಳು ಗೇಣಿದಾರರಿಂದ ಬಂದಿದ್ದು, 11077 ಅರ್ಜಿಗಳು ಅವರ ಪರವಾಗಿಯೇ ನಿರ್ಣಯಗೊಂಡರೂ, ಹೆಚ್ಚಿನ ಪ್ರಕರಣಗಳು ಹೈಕೋರ್ಟಿನಲ್ಲಿ ನೆನೆಬಿದ್ದಿವೆ.

ಕೊಡಗು :

ಇದು ಮುಖ್ಯ ಮಂತ್ರಿ ಗುಂಡೂರಾಯರ ಜಿಲ್ಲೆ. ಇಲ್ಲಿ ಕೇವಲ 3760 ಅರ್ಜಿಗಳು ಗೇಣಿದಾರರಿಂದ ಟ್ರಿಬ್ಯೂನಲ್‌ಗಳಿಗೆ ಬಂದಿವೆ. ಇಲ್ಲಿ ಕುಟುಂಬದ ಪ್ರತಿ ಒಬ್ಬ ಸದಸ್ಯನನ್ನೂ ವ್ಯವಸಾಯಗಾರನೆಂದು ದಾಖಲೆಗೊಳಿಸಿರುವುದರಿಂದ ಭೂ ಸ್ವಾಧೀನತೆ ಪಡೆಯಲು ಸಲ್ಲಿಸಿದ ಹೆಚ್ಚಿನ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. 1020 ಅರ್ಜಿಗಳು ಒಕ್ಕಲುಗಳ ಪರವಾಗಿದ್ದರೂ, ಅವುಗಳಲ್ಲಿ ಅರ್ಧದಷ್ಟು ಅರ್ಜಿದಾರರಿಗೆ ಇನ್ನೂ ಸಿಗಲಿಲ್ಲ. ಕಾರಣ ಅವುಗಳು ಹೈಕೋರ್ಟಿನಲ್ಲಿ ಕೊಳೆಯುತ್ತಿವೆ.

ಹಾಸನ :

ಈ ಜಿಲ್ಲೆಯಲ್ಲಿ 29326 ಅರ್ಜಿಗಳು ಗೇಣಿದಾರರಿಂದ ಬಂದಿದ್ದು 28373 ಅರ್ಜಿಗಳು ಸೆಪ್ಟೆಂಬರ್ 81 ರಷ್ಟರಲ್ಲಿ ತೀರ್ಮಾನವಾಗಿದ್ದು, 13470 ಅರ್ಜಿಗಳು ಗೇಣಿದಾರರ ಪರವಾಗಿದ್ದವು. ಆದರೆ, ಸಂಪೂರ್ಣ ವಿಚಾರಣೆ ಮತ್ತು ಪರಿಶೀಲನೆಗಳಿಲ್ಲದೆ ಅಪಾರ ಅನ್ಯಾಯಗಳಾಗಿವೆ. ಇಲ್ಲಿಯ ಟ್ರಿಬ್ಯೂನಲ್ ಸದಸ್ಯರು ಲಂಚಗುಳಿತನಕ್ಕೆ ಹೆಸರುವಾಸಿಯಾಗಿದ್ದಾರೆ. ಗೇಣಿದಾರರಿಂದಲೂ, ಭೂ ಮಾಲೀಕರಿಂದಲೂ, ಬೇನಾಮಿ ಅರ್ಜಿದಾರರಿಂದಲೂ ಲಂಚ ಗಿಟ್ಟಿಸಿಕೊಳ್ಳುತ್ತಾರೆ. ಒಂದೊಂದು ಪ್ರಕರಣಕ್ಕೆ ರೂ. 100–200 ರಿಂದಲೂ, ರೂ. 8000-10000 ದ ವರೆಗೆ ಲಂಚ ವಿತರಣೆಯಾಗುತ್ತಿದೆ ಎಂದು ವರದಿಯಾಗಿದೆ. ಲಂಚ ಕೊಟ್ಟರೂ ನ್ಯಾಯ ಸಿಗದೆ ಟ್ರಿಬ್ಯೂನಲ್‌ಗಳಲ್ಲಿ ಎರಡು ಪಕ್ಷದವರು ಹೊ್ಯ ಕೈ ಮಾಡಿಕೊಂಡಿದ್ದೂ ಉಂಟು.

ಮೈಸೂರು ;

ಇಲ್ಲಿನ ಟ್ರಿಬ್ಯೂನಲ್‌ಗಳೂ, ಲಂಚ, ಅನ್ಯಾಯ, ಅಕ್ರಮಗಳಿಗೆ ಹೆಸರುವಾಸಿಯಾಗಿವೆ. ನೀರಾವರಿ ಇರುವ ಭೂಮಿಯೇ ಇಲ್ಲಿ ಹೆಚ್ಚು ಇರುವುದರಿಂದ ಲಂಚದ ದರವೂ ಹೆಚ್ಚಿರುವುದು. ಗೇಣಿದಾರರಿಗಿಂತ ಭೂ ಮಾಲೀಕರೇ ಬಲಿಷ್ಠರಾಗಿರುವುದರಿಂದ ಶೇ. 50 ರಷ್ಟು ಅರ್ಜಿಗಳು ಭೂ ಮಾಲೀಕರ ಪರವಾಗಿಯೇ ತೀರ್ಮಾನಗೊಂಡವು. ಒಟ್ಟು 36,662 ಅರ್ಜಿಗಳಲ್ಲಿ 32,184 ಅರ್ಜಿಗಳು ಲೆಕ್ಕಕ್ಕೆ ತೀರ್ಮಾನಗೊಂಡರೂ ನ್ಯಾಯ ಬಡ ಗೇಣಿದಾರರಿಗೆ ಬಹು ಪಾಲು ಸಿಗಲೇ ಇಲ್ಲ.

ತುಮಕೂರು :

ಒಟ್ಟು 14,288 ಅರ್ಜಿಗಳಲ್ಲಿ ಜೂನ್ 81 ರವರೆಗೆ 7,160 ಅರ್ಜಿಗಳು ತೀರ್ಮಾನಗೊಂಡಿದ್ದರೆ, ಮುಂದಿನ ಮೂರೂವರೆ ತಿಂಗಳಲ್ಲಿ 4,798 ಅರ್ಜಿಗಳು ಇತ್ಯರ್ಥಗೊಂಡವು. ಕೊನೆ ಕೊನೆಗೆ ಹಗಲು ರಾತ್ರಿ ಅರ್ಜಿಗಳು ಇತ್ಯರ್ಥವಾದವು. ಸರಕಾರದ ಲೆಕ್ಕಕ್ಕೆ ಕೆಲಸ ಮುಗಿಯಿತು. ಆದರೆ ನ್ಯಾಯ? ಅರ್ಜಿದಾರರಲ್ಲಿ ಶೇ. 40ರಷ್ಟೇ ನಿಜವಾದ ಉಳುಮೆದಾರರು, ಇತರರು ಗ್ರಾಮ ಲೆಕ್ಕಿಗರಿಗೆ ಲಂಚ

ಕೊಟ್ಟು, ಗೇಣಿ ಚೀಟಿ ತಮ್ಮ ಹೆಸರಿನಲ್ಲಿ ಬರೆಸಿಕೊಂಡು ಅರ್ಜಿಗಳನ್ನು ಸಲ್ಲಿಸಿದವರು, ಅರ್ಜಿದಾರರಲ್ಲಿ ಅಸಲು ಯಾವುದು —ನಕಲು ಯಾವುದು ಎಂದು ಕಂಡು ಹುಡುಕುವುದೇ ಕಷ್ಟ! ನಿಜವಾದ ಒಕ್ಕಲುಗಳ ಭೂಮಿ ಧನಿಗಳಿಗೇ ಸೇರಿದ್ದುಂಟು. ಧನಿಗಳ ಭೂಮಿ ನಕಲೀ ಗೇಣಿದಾರರಿಗೆ ಸೇರಿದ್ದೂ ಉಂಟು. ಒಂದು ಪ್ರಕರಣದಲ್ಲಿ ಹರಿಜನ ಒಬ್ಬನ 3 ಎಕರೆ ಸ್ವಂತ ಭೂಮಿಯೂ 10 ಎಕ್ರೆ ನೀರಾವರಿ ಭೂಮಿ ಇರುವ ಒಬ್ಬ ಉಚ್ಚ ಜಾತಿಯ ಗೇಣಿದಾರನ ವಶವಾಗಿರುವ ವರದಿಯಾಗಿದೆ.

ಗುಲ್ಬರ್ಗ :

ಈ ಜಿಲ್ಲೆಯಲ್ಲಿ ದೊಡ್ಡ ಜಮೀನ್ದಾರರ ಆಶ್ರಯದಲ್ಲಿ ಬಹುಸಂಖ್ಯಾತ ಗೇಣಿದಾರರಿದ್ದಾರೆ. 52,000 ಅರ್ಜಿಗಳಲ್ಲಿ ಕೇವಲ 9,500 ಅರ್ಜಿದಾರರು ಭೂಸ್ವಾಧೀನತೆ ಪಡೆಯುವಂತಾಯಿತು. 45,200 ಅರ್ಜಿಗಳು ಧನಿಗಳ ಪರವಾಗಿಯೇ ತೀರ್ಮಾನಗೊಂಡವು! ಇನ್ನೂ 6,800 ಅರ್ಜಿಗಳು ಬಾಕಿ ಇವೆ. ಈ ಜಿಲ್ಲೆಯಲ್ಲಿ ಎಲ್ಲಾ ಭೂ ದಾಖಲೆಗಳು ಭೂ ಮಾಲೀಕರ ಹೆಸರಿನಲ್ಲಿಯೇ ಇರುವುದರಿಂದ ಗೇಣಿದಾರರು ತಮ್ಮ ಹಕ್ಕುಗಳನ್ನು ಸಾಬೀತುಪಡಿಸುವುದು ಕಷ್ಟವಾಗಿದೆ. ಟ್ರಿಬ್ಯೂನಲ್ ಸದಸ್ಯರೂ, ಗ್ರಾಮಾಧಿಕಾರಿಗಳೂ ಹೆಚ್ಚಾಗಿ ಭೂಮಾಲೀಕರ ಪರವಾಗಿಯೇ ಇದ್ದವರು. ಭೂಮಿ ಗೇಣಿದಾರರ ಹೆಸರಿನಲ್ಲಿ ಇದ್ದರೂ ಭೂ ಮಾಲೀಕರ ಲಂಚ ರುಸುವತ್ತುಗಳಿಗೆ ಬಲಿಯಾಗಿ ಗ್ರಾಮಾಧಿಕಾರಿಗಳು ಮೂಲ ದಾಖಲೆಗಳಲ್ಲಿ ಬದಲಾವಣೆಗಳನ್ನು ಭೂ ಮಾಲಿಕರ ಪರವಾಗಿಯೇ ಮಾಡಿದರು. 1961 ರಿಂದಲೇ ಭೂ ಸುಧಾರಣೆಯ ಸುದ್ದಿ ತಿಳಿದಿರುವ ಭೂ ಮಾಲೀಕರು ತಮ್ಮ ಭೂಮಿ ಕೈ ಬಿಡದಂತೆ ಸೂಕ್ತ ಕ್ರಮ ಕೈಕೊಳ್ಳ ತೊಡಗಿದ್ದರು. ಅವಸರದಿಂದ ತುಂಬ ಅನ್ಯಾಯವಾಗಿದೆ. ಚಿಂಚೊಳ್ಳಿ ಟ್ರಿಬ್ಯೂನಲ್ ಒಂದರಲ್ಲಿ ಏಪ್ರಿಲ್ 81ರಲ್ಲಿ ಕೇವಲ 32 ಅರ್ಜಿಗಳನ್ನು ಇತ್ಯರ್ಥಗೊಳಿಸಿದ್ದರೆ, ಸೆಪ್ಟೆಂಬರ್ 81 ರಲ್ಲಿ 1031 ಅರ್ಜಿಗಳನ್ನು ಇತ್ಯರ್ಥ ಮಾಡಲಾಯಿತು. ಇದರಿಂದ್ಕ ಧನಿಗಳಿಗೇ ಲಾಭ. ಟ್ರಿಬ್ಯೂನಲ್ ಸದಸ್ಯರಿಗೆ ಮತ್ತು ಆಡಳಿತಾಧಿಕಾರಿಗಳಿಗೆ ಅಕ್ರಮ ಧನಲಾಭ. ಅನೇಕ ಪ್ರಕರಣಗಳು ಹೈಕೋರ್ಟಿನಲ್ಲಿವೆ.

ರಾಯಚೂರು :

ಸೆಪ್ಟೆಂಬರ್ 81 ರವರೆಗೆ 14 ಟ್ರಿಬ್ಯುನಲ್‌ಗಳಲ್ಲಿ 20344 ಅರ್ಜಿಗಳು ಇತ್ಯರ್ಥಗೊಂಡಿವೆ. ಅವುಗಳಲ್ಲಿ ಕೇವಲ 4331 ಅರ್ಜಿಗಳು ಶೇ. 25 ಕ್ಕಿಂತಲೂ ಕಡಿಮೆ ಗೇಣಿದಾರ್ರರ ಪರವಾಗಿದ್ದವು. ಇಲ್ಲಿಯೂ ಭಾರೀ ಭ್ರಷ್ಟಾಚಾರ. ಆಡಳಿತ ಅಧಿಕಾರಿಗಳೂ ರಾಜಕೀಯ ಪುಡಾರಿಗಳೊಂದಿಗೆ ಶಾಮೀಲಾಗಿರುವರು.

ಬೆಳಗಾಂ :

ಪ್ರಾಮಾಣಿಕ ಅಧಿಕಾರಿಗಳು ಟ್ರಿಬ್ಯೂನಲ್ ಅಧ್ಯಕ್ಷರಾಗಿದ್ದರೂ, ಬಹುಮತ ಆಳುವ ಪಕ್ಷದ ಸದಸ್ಯರಿಗೇ ಇರುವುದರಿಂದ ಅವರ ನಿರ್ಧಾರಗಳೇ ಅಂತಿಮವಾಗುತ್ತಿದ್ದವು. ಮಂತ್ರಿ ಪದವಿ ಸಿಗದಿರುವವರಿಗೆ ಈ ಟ್ರಿಬ್ಯೂನಲ್‌ಗಳ ಸದಸ್ಯತ್ವದಲ್ಲಿಯೇ ಹಣಮಾಡಿಕೊಳ್ಳಲು ಅವಕಾಶ. ಒಂದಷ್ಟು ಭಾಗ್ಯ ಈ ಜಿಲ್ಲೆಯಲ್ಲಿ 70296 ಅರ್ಜಿಗಳಲ್ಲಿ ಆಗಸ್ಟ್ 81 ರಷ್ಟರಲ್ಲಿ 42346 ಅರ್ಜಿಗಳು ಗೇಣಿದಾರರ ಪರವಾಗಿ ಇತ್ಯರ್ಥವಾಗಿದ್ದವು 29923 ಗೇಣಿದಾರರಿಗೆ ಭೂ ಸ್ವಾಧೀನತೆ ನೀಡಲಾಗಿದೆ.

ಕೋಲಾರ :

ಈ ಜಿಲ್ಲೆಯ 12 ಟ್ರಿಬ್ಯೂನಲ್‌ಗಳಲ್ಲಿ 24794 ಅರ್ಜಿಗಳು ಬಂದಿದ್ದು 19557 ಪ್ರಕರಣಗಳು ಇತ್ಯರ್ಥವಾಗಿದ್ದವು. ಅವುಗಳಲ್ಲಿ 11,373 ಅರ್ಜಿಗಳು ಗೇಣಿದಾರರ ಪರವಾಗಿದ್ದವು. ಇಲ್ಲಿಯೂ ಟ್ರಿಬ್ಯೂನಲ್ ಸದಸ್ಯರ ಆಗಾಗ ಬದಲಾವಣೆ, ಭ್ರಷ್ಟಾಚಾರ, ಅವಸರ, ರಾಜಕೀಯ ಪುಡಾರಿಗಳ ಹಸ್ತಕ್ಷೇಪ ಇತ್ಯಾದಿ ಕಾರಣಗಳಿಂದ ಗೇಣಿದಾರರಿಗೆ, ಬಡ ರೈತರಿಗೆ ತುಂಬಾ ಅನ್ಯಾಯವಾಗಿದೆ.

ಮಂಡ್ಯ :

ಈ ಜಿಲ್ಲೆಯ 9 ಟ್ರಿಬ್ಯುನಲ್‌ಗಳಲ್ಲಿ 15265 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ 9530 ಅರ್ಜಿಗಳು ಗೇಣಿದಾರರ ಪರವಾಗಿದ್ದವು. ಒಟ್ಟು ಅರ್ಜಿಗಳಲ್ಲಿ 9490 ಉಂಬಳಿ ಭೂಮಿಗೆ (ಟಿಪ್ಪುವಿನ ಕಾಲದಿಂದ ಧಾರ್ಮಿಕ ಮತ್ತು ದಾನದತ್ತುಗಳಿಗೆ ಬಿಟ್ಟುಕೊಟ್ಟ 44478 ಎಕರೆ ಭೂಮಿ) ಸಂಬಂಧಿಸಿದವುಗಳು. ಅವುಗಳಲ್ಲಿ ಕೇವಲ 2595 ಇತ್ಯರ್ಥವಾದವು. ಈ ಪ್ರಕರಣಗಳ ವಿಚಾರಣೆ ಬಹಳೆ ಮಂದವಾಗಿರುತ್ತಿದೆ. ಈ ಜಿಲ್ಲೆಯಲ್ಲಿ ಕೃಷಿಕಾರ್ಮಿಕರನ್ನು ನೇಮಿಸಿ ಸ್ವಂತ ವ್ಯವಸಾಯ ಮಾಡುವ ರೈತರೇ ಹೆಚ್ಚು. ಕೆಲವೆಡೆಗಳಲ್ಲಿ ಒತ್ತಾಯ ಬಲತ್ಕಾರಗಳಿಗೆ ಬಲಿಬಿದ್ದು ಗೇಣಿದಾರರಿಂದ ಅರ್ಜಿಗಳನ್ನು ವಾಪಸು ತೆಗೆಸಿಕೊಳ್ಳಲಾಗಿದೆ. ಹೆಚ್ಚುವರಿ ಭೂಮಿಯ ಕುರಿತು 57820 ಎಕರೆಗಳಿಗೆ ಸಂಬಂಧಿಸಿ 2179 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ 1356 ಅರ್ಜಿಗಳು ಇತ್ಯರ್ಥವಾಗಿದ್ದು ಕೇವಲ 500 ಎಕರೆ ಭೂಮಿ ಮರುವಿತರಣೆಗೆ ಸಿಕ್ಕಿದೆ?

ಉತ್ತರ ಕನ್ನಡ ಜಿಲ್ಲೆ :

ಒಟ್ಟು 98217 ಅರ್ಜಿಗಳಲ್ಲಿ 85000 ಅರ್ಜಿಗಳು ಇತ್ಯರ್ಥವಾಗಿವೆ. ಆದರೆ ಅವುಗಳಲ್ಲಿ ಅರ್ಧಕ್ಕರ್ಧ ಹೈಕೋರ್ಟಿಗೆ ಅಪೀಲು ಹೋಗಿವೆ. ಹೈಕೋರ್ಟಿಗೆ ಹೋದವುಗಳಲ್ಲಿ ಶೇ. 95ರಷ್ಟು ಪ್ರಕರಣಗಳಲ್ಲಿ ತಡೆಯಾಜ್ಞೆಗಳು ಬಂದಿವೆ. ಟ್ರಿಬ್ಯುನಲ್‌ಗಳಲ್ಲಿ ಬಹು ಭಾಷೆಗಳ ಸಮಸ್ಯೆಯೂ ಇದೆ. ಕನ್ನಡ, ಕೊಂಕಣಿ, ಮರಾಠಿ, ಇಂಗ್ಲೀಷ್ ಎಲ್ಲವೂ ಸ್ವಲ್ಪ ಸ್ವಲ್ಪ ಬಳಕೆಯಾಗುತ್ತಿದೆ. ವಿಚಾರಣೆ ಒಂದು ಭಾಷೆಯಲ್ಲಿ, ತೀರ್ಪು ಇನ್ನೊಂದು ಭಾಷೆಯಲ್ಲಿ, ದಾಖಲೆ ಮತ್ತೊಂದು ಭಾಷೆಯಲ್ಲಿ, ಒಟ್ಟು ಗೊಂದಲ! ಟ್ರಿಬ್ಯುನಲ್ ಸದಸ್ಯರು, ರಾಜಕೀಯ ಪುಢಾರಿಗಳು ಜನರ ಅಸಹಾಯಕತೆಯ ದುರುಪಯೋಗ ಪಡೆಯುತ್ತಿದ್ದಾರೆ. ಕಾಳೀ ಯೋಜನೆಯಲ್ಲಿ ಮುಳುಗಿರುವ 40 ಹಳ್ಳಿಗಳಿಗೆ ಸಂಬಂಧಿಸಿದ ನೂರಾರು ಎಕರೆ ಭೂಮಿಯ ಸ್ವಾಧೀನತೆಯ ಹಕ್ಕನ್ನು ಗೇಣಿದಾರರಿಗೆ ನೀಡಲಾಗಿದೆ. ಪ್ರಯೋಜನ ಏನು?

ಬೆಂಗಳೂರು : ಈ ಜಿಲ್ಲೆಯ ಹಳ್ಳಿಗಳು ರಾಜಧಾನಿಗೆ ಹತ್ತಿರವಾಗಿರುವುದರಿಂದ ಭೂಮಿಗೆ ಭಾರೀ ಬೆಲೆ. ಟ್ರಿಬ್ಯುನಲ್ ಪ್ರಕರಣಗಳಲ್ಲಿ ಹಣ ಬಟವಾಡೆಗೆ ಇನ್ನಷ್ಟು ಅವಕಾಶ. ಕೆಲವು ಕೈಗಾರಿಕಾ ಸಂಸ್ಥೆಗಳ ಉನ್ನತ ಅಧಿಕಾರಿಗಳು ತಮ್ಮ ಕಂಪನಿಗಳ ಭೂಮಿಗೆ ತಾವು ಗೇಣಿದಾರರು ಎಂದು ಅರ್ಜಿ ಸಲ್ಲಿಸಿ ಭೂಸ್ವಾಧೀನತೆ ಪಡೆದಿದ್ದಾರೆ! ಕೆಲವೆಡೆಗಳಲ್ಲಿ ವ್ಯವಸಾಯ ಭೂಮಿಯನ್ನು ತೋಟದ ಭೂಮಿ ಎಂದು ಪರಿಗಣಿಸಲಾಗಿದೆ. ಟ್ರಿಬ್ಯುನಲ್‌ಗಳಲ್ಲಿ ಆಳುವ ಪಕ್ಷದ ಪುಡಾರಿಗಳದ್ದೇ ಮೇಲ್ಗೈ. ಮಂತ್ರಿಗಳ ಪ್ರಭಾವವೂ ಹೆಚ್ಚು.

ಬಳ್ಳಾರಿ :

ಅವಸರ, ಅನ್ಯಾಯ, ಲಂಚ, ಭ್ರಷ್ಟಾಚಾರ, ಟ್ರಿಬ್ಯುನಲ್ ಸದಸ್ಯತ್ವ ಎಂದರೆ ಲಾಭಗಳಿಸುವ ಹುದ್ದೆ! ಈ ಜಿಲ್ಲೆಯ ಹಡಗಲಿಯ ಒಬ್ಬ ಬಡ ಹರಿಜನ ಗೇಣಿದಾರನ 14 ಎಕರೆ ಭೂಮಿಯನ್ನು ಒಬ್ಬ ದೊಡ್ಡ ಭೂಮಾಲೀಕನ ಸ್ವಾಧೀನಕ್ಕೆ ನೀಡಲು ಟ್ರಿಬ್ಯುನಲ್ ನಿರ್ಧರಿಸಿತು. ಅವರು ಸ್ವಾತಂತ್ರ ಹೋರಾಟಗಾರನೆಂಬ ನೆವ ಅಷ್ಟೆ! ಪರಿಣಾಮ ಹರಿಜನ ಗೇಣಿದಾರ ನಿರ್ಗತಿಕನಾಗಬೇಕಾಯಿತು. ಹೀಗೆ ಗೇಣಿದಾರರಲ್ಲದವರಿಗೆ ಭೂಸ್ವಾಧೀನತೆ ಕೊಟ್ಟ ಅನೇಕ ಪ್ರಕರಣಗಳಿವೆ. ಹೊಸಪೇಟೆಯಲ್ಲಿ ನೀರಾವರಿ ಸೌಕರ್ಯವಿರುವುದರಿಂದ ಇಂತಹ ಅನ್ಯಾಯ ಬೃಹತ್ ಪ್ರಮಾಣದಲ್ಲಿ ನಡೆದಿದೆ. ಇಲ್ಲಿ 6332 ಇತ್ಯರ್ಥವಾದ ಪ್ರಕರಣಗಳಲ್ಲಿ 2740 ಅರ್ಜಿಗಳು ಮಾತ್ರ ಗೇಣಿದಾರರ ಪರವಾಗಿದ್ದವು. ಹೆಚ್ಚುವರಿ ಭೂಮಿಯಲ್ಲಿ ಕೇವಲ 3812 ಎಕರೆಗಳಷ್ಟು ಮರುವಿತರಣೆ ಮಾಡಿ ಸ್ವಾಧೀನತೆ ಕೊಡಲಾಗಿದೆ. ಭೂಸ್ವಾಧೀನತೆ ಪಡೆದವರಲ್ಲಿ 417 ಜನರು ಪರಿಶಿಷ್ಟ ಜಾತಿಯವರು (23 ಎಕ್ರೆ) ಇದು ಇಂದಿರಾ ಗಾಂಧಿ ಗುಂಡೂರಾಯರ ಸಮಾಜವಾದ!

ಭೂಮಿ ಕಳೆದುಕೊಂಡ ಸಣ್ಣ ಹಿಡುವಳಿದಾರರು, ಅಪ್ರಾಯಸ್ಥರು, ಅಂಗವಿಕಲರು, ವಿಧವೆಯರು ತಮ್ಮ ಪರಿಹಾರಧನ ಪಡೆಯಲಿಕ್ಕೆ ಬಹಳ ಪರಿದಾಡಬೇಕು. ಸಿಕ್ಕ ಸಿಕ್ಕವರಿಗೆ ಲಂಚ ಕೊಡಬೇಕು. ಲಂಚ ಕೊಡುವ ಶಕ್ತಿಗನುಗುಣವಾಗಿ ಪರಿಹಾರಧನದ ಮೊತ್ತವೂ ನಿರ್ಧರಿಸಲ್ಪಡುವುದು! ಶ್ರೀಮಂತರು ತಮ್ಮ ಭೂಮಿ ಉಳಿಸಿಕೊಳ್ಳಲು ಸಾವಿರಗಟ್ಟಲೆ ಖರ್ಚು ಮಾಡಿದರು. ದಲಿತರು ಬಡವರು, ತುಳಿತಕ್ಕೆ ಒಳಗಾದವರು ಎಲ್ಲಿದ್ದರೋ ಅಲ್ಲಿಯೇ ಉಳಿದರು. ಅವರು ಧನಿಗಳ ಜೀತದಿಂದ ಬಿಡುಗಡೆಯಾಗಲೇ ಇಲ್ಲ.

ಧಾರವಾಡ :

ಒಟ್ಟು 60728 ಅರ್ಜಿಗಳಲ್ಲಿ ಶೇ. 90ರಷ್ಟು ಇತ್ಯರ್ಥವಾಗಿವೆ. 2500 ಅರ್ಜಿಗಳು ಹೈಕೋರ್ಟಿನಲ್ಲಿವೆ. ಟ್ರಿಬ್ಯುನಲ್ ಸದಸ್ಯರು ದಾಖಲೆಗಳನ್ನು ಪರಿಶೀಲಿಸುವುದಿಲ್ಲ, ಸಾಕ್ಷಿದಾರರನ್ನು ವಿಚಾರಿಸುವುದಿಲ್ಲ, ತೀರ್ಪುಗಳನ್ನು ಸಕಾರಣವಾಗಿ ದಾಖಲೆ ಮಾಡುವುದಿಲ್ಲ ಅವರ ಪರವಾಗಿ ನಿರ್ಧರಿಸುವದರಿಂದ ಸ್ಥಳಕ್ಕೆ ಸಂದರ್ಶಿಸಿ ಆಸೂಪಾಸಿನ ರೈತರನ್ನು ವಿಚಾರಿಸುವದೂ ಇಲ್ಲ. ಎಲ್ಲವೂ ಏಕಪಕ್ಷೀಯ ನಿರ್ಣಯಗಳು. ಕುಂದುಗೋಳಿನಲ್ಲಿ ಒಬ್ಬ ಗೇಣಿದಾರ 7-8 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದು ಭೂಸ್ವಾಧೀನತೆಗೆ ಅರ್ಜಿ ಕೊಟ್ಟಿದ್ದು, ವಿಚಾರಣೆಯಲ್ಲಿ ಭೂಮಾಲೀಕನ ಪರವಾಗಿಯೇ ತೀರ್ಪು ಆಯಿತು. ಭೂಮಾಲೀಕನಿಗೆ ಪೋಲಿಸರ ಸಹಾಯವೂ ಇತ್ತು!

ಬಿಜಾಪುರ ;

ಬಿಜಾಪುರದಲ್ಲಿ ಜನರು ಟ್ರಿಬ್ಯುನಲ್ ಸದಸ್ಯರ ಭ್ರಷ್ಟಾಚಾರದ ವಿರುದ್ಧ ಮತಪ್ರದರ್ಶನ ನಡೆಸಿದ್ದಾರೆ. ಅಲ್ಲಿ ಇತ್ತೀಚೆಗೆ ಎರಡು ಅಭೂತಪೂರ್ವ ಕತ್ತೆ ಮೆರವಣಿಗೆಗಳು ನಡೆದವು. ಕತ್ತೆಗಳ ಕುತ್ತಿಗೆಗೆ ಚಪ್ಪಲಿಗಳ ಹಾರಗಳು, ಅವುಗಳ ತಲೆಗೆ ಟ್ರಿಬ್ಯುನಲ್ ಸದಸ್ಯರ ಹೆಸರುಗಳ ಫಲಕಗಳು! ಅವುಗಳ ಬೆನ್ನ ಮೇಲಿನ ಫಲಕಗಳಲ್ಲಿ 'ನಮ್ಮ ಹಣ ಮರಳಿಸಿ, ನಮ್ಮ ಭೂಮಿ ಮರಳಿಸಿ' ಎಂದು ದೊಡ್ಡ ಬರಹಗಳು! ಟ್ರಿಬ್ಯುನಲ್ 1 ಮತ್ತು 2 ನಡೆಯುತ್ತಿದ್ದ ಸ್ಥಳದಲ್ಲೇ ಈ ಮೆರವಣಿಗೆಗಳು ನಡೆದವು. ಜಿಲ್ಲೆಯ ರೈತ ಸಂಘ ಮತ್ತು ಸಿ.ಪಿ.ಐ. (ಎಂ) ಒಟ್ಟಿಗೆ ಈ ಮೆರವಣಿಗೆಗಳನ್ನು ಏರ್ಪಡಿಸಿದ್ದವು. ಟ್ರಿಬ್ಯುನಲ್ ಸದಸ್ಯರನ್ನು ಘೇರಾವೋ ಮಾಡಬೇಕೆಂದಿದ್ದರು. ಆದರೆ ಪೋಲಿಸ್ ಪ್ರತಿಬಂಧಕಾಜ್ಞೆ ಜ್ಯಾರಿಗೊಳಿಸಿದ್ದರಿಂದ ಸಾಧ್ಯವಾಗಲಿಲ್ಲ. ಆದರೆ ಘೋಷಣೆಗಳೊಂದಿಗೆ ಮೆರವಣಿಗೆ ಮುಂದುವರೆಯಿತು. ಭೂಮಿ ಕಳದುಕೊಂಡ ಗೇಣಿದಾರ ರೈತರು ಬಹಳ ಸಿಟ್ಟಾಗಿದ್ದರು. ಟ್ರಿಬ್ಯುನಲ್ ಸದಸ್ಯರು ಹೆದರಿ ತಲೆ ಮರೆಸಿಕೊಂಡಿದ್ದರು. ಭೂಮಿ ಮರುವಿತರಣೆಯಲ್ಲಿ ರೈತರಿಗೆ ಬಹಳ ಅನ್ಯಾಯವಾಗಿದೆ. ಒಟ್ಟು 41268 ಗೇಣಿದಾರರ ಅರ್ಜಿಗಳಲ್ಲಿ, 38070 ಅರ್ಜಿಗಳು ಇತ್ಯರ್ಥಗೊಂಡವು. ಅವುಗಳಲ್ಲಿ 32630 ಅರ್ಜಿಗಳು ಗೇಣಿದಾರರ ಪರ ಮತ್ತು 15444 ಅರ್ಜಿಗಳು ಭೂಮಾಲೀಕರ ಪರವಾಗಿದ್ದವು. ಹೆಚ್ಚುವರಿ ಭೂಮಿಗೆ ಸಂಬಂಧಿಸಿ 32982 ಅರ್ಜಿಗಳು ಬಂದಿದ್ದು ಅವುಗಳಲ್ಲಿ 2481 ಜನರಿಗೆ 13157 ಎಕರೆ ಭೂಮಿ ವಿತರಣೆಯಾಗಿದೆ. 350 ಪ್ರಕರಣಗಳು ಹೈಕೋರ್ಟಿಗೆ ಹೋಗಿವೆ.

ಈ ದೀರ್ಘ ಸಮೀಕ್ಷೆಯಿಂದ ಮುಖ್ಯವಾಗಿ ತಿಳಿದು ಬರುವುದೇನೆಂದರೆ, ಭೂಸುಧಾರಣೆಯು, ಭೂಮಿತಿಯ ಕಾಯಿದೆಯಂತೆ ಹೆಚ್ಚುವರಿ ಭೂಮಿಯನ್ನು ನ್ಯಾಯವಾಗಿ ಭೂಹೀನ ಕೃಷಿಕಾರ್ಮಿಕರಿಗೆ, ಹರಿಜನ ಗಿರಿಜನರಿಗೆ, ಬಡರೈತರಿಗೆ ಮರುವಿತರಣೆ ಮಾಡುವ ಕೆಲಸವು ಭಂಡವಾಳಶಾಹಿ–ಭೂಮಾಲಿಕರ ಪಕ್ಷಪಾತಿ ರಾಜಕೀಯ ಪುಡಾರಿಗಳಿಂದಾಗಲೀ ಅವರ ಬಾಲಬುಡುಕರಾದ ಆಡಳಿತ ಅಧಿಕಾರಿಗಳಿಂದಾಗಲೀ ಸಾಧ್ಯವಾಗಲಾರದು. ಗ್ರಾಮೀಣ ಪ್ರದೇಶಗಳಲ್ಲಿ ಭೂ ಸಂಬಂಧದಲ್ಲಿ ಕ್ರಾಂತಿಕಾರಿ ಬದಲಾವಣೆಯು ಬಡ ಹಾಗೂ ಮಧ್ಯಮ ರೈತ ಸಂಘಟನೆ ಹಾಗೂ ಭೂರಹಿತ ಕೃಷಿ ಕಾರ್ಮಿಕರ ಸಂಘಟಿತ ಹೋರಾಟದಿಂದ ಮಾತ್ರ ಸಾಧ್ಯ. ●

ಇನ್ನೂ ಕೈಗೆ ಸಿಕ್ಕದ ಕಾಂಗ್ರೆ ಸಂಸತ್ ಸದಸ್ಯ

ಕೊಲೆ ಮಾಡಲು ಪ್ರಯತ್ನಿಸಿದ್ದಕ್ಕೆ, ಡ್ಯೂಟಿ ಮೇಲಿದ್ದ ಪೋಲೀಸರನ್ನೇ ಅಪಹರಿಸಿದ್ದಕ್ಕಾಗಿ, ದೊಂಬಿ ಪ್ರಕರಣಗಳಲ್ಲಿ ಆಪಾದಿತರಾಗಿರುವ ಕಾಂಗ್ರೆ ಸಂಸತ್ ಸದಸ್ಯ **ಗುಫ್ರಾನ್ ಅಜ್ಮೆನ್** ಇನ್ನೂ ಪೋಲೀಸರ ಕೈಗೆ ಸಿಕ್ಕಿಲ್ಲ!

ಭೂಪಾಲ (ಮಧ್ಯ ಪ್ರದೇಶ)ದ ಪ್ರಥಮ ದರ್ಜೆ ನ್ಯಾಯಾಧೀಶರು ಎರಡು ಸಲ ವಾರಂಟ್ ಹೊರಡಿಸಿದ್ದರೂ ಈ ಮಹಾಶಯನನ್ನು ಪೋಲೀಸರು ಬಂಧಿಸದಿರುವುದನ್ನು ಕುರಿತು ವಿಷಾದ ವ್ಯಕ್ತಪಡಿಸಿದ್ದಾರೆ.

ಈ ಮಹಾಶಯರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದು ಕಾಂಗ್ರೆನ ಪಿ. ಸಿ. ಸೇಠಿಯವರ ಸರಕಾರ.

ಬೀಡಿ ಮಜೂರರ ವಿಸ್ತೃತ ಸಭೆ

21–2–82 ರಂದು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಪಡುಬೊಂಡತಿಲ ಪ್ರದೇಶ ಬೀಡಿ ಮಜೂರರ ವಿಸ್ತೃತ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಕೆ ಆರ್. ಶ್ರೀಯಾನ್ ವಹಿಸಿದ್ದರು.

ಬೀಡಿ ಕಾರ್ಮಿಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಹಾಗೂ ಸಂಘಟನೆಯ ಬಗ್ಗೆ ವಿವರಿಸಿ ಸಂಘದ ಕಾರ್ಯದರ್ಶಿ ಕೆ. ಬಾಬುದೇವಾಡಿಗ ಮತ್ತು ದೊಂಬಯ್ಯನವರು ಮಾತನಾಡಿದರು.

ಕಾಂ| ಶ್ರೀಯಾನ್ ಮಾತನಾಡುತ್ತಾ ಸಂಘಟಿತ ಹೋರಾಟಗಳನ್ನು ನಡೆಸಿದಾಗ ಮಾತ್ರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯ ಎಂದರು. ಅವರು ಮುಂದುವರೆದು, ಬೀಡಿ ಕಾರ್ಮಿಕರನ್ನು ಕಂಟ್ರಾಕ್ಟರುಗಳು ಬಹಳಷ್ಟು ಶೋಷಿಸುತ್ತಿರುವುದಾಗಿ ತಿಳಿಸಿ, ಸೂಕ್ತ ಕನಿಷ್ಟವೇತನ ಪಡೆಯಲು ಹೋರಾಟ ತೀವ್ರಗೊಳಿಸಬೇಕೆಂದರು.

ಹನ್ನೊಂದನೇ ಅಧಿವೇಶನದ ಠರಾವುಗಳು

ವಿಜಯವಾಡದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 11ನೇ ಸಮ್ಮೇಳನವು ಅಂಗೀಕರಿಸಿದ ಠರಾವುಗಳಲ್ಲಿ ಕೆಲವನ್ನು 21-2-1982ರ ಐಕ್ಯರಂಗದಲ್ಲಿ ಪ್ರಕಟಿಸಿದ್ದೇವು. ಉಳಿದವುಗಳನ್ನು ಕೆಳಗೆ ಪ್ರಕಟಿಸುತ್ತಿದ್ದೇವೆ.

ಜನಾಂಗ ಭೇದ ನೀತಿ

ಜನಾಂಗಗಳ ನಡುವಣ ಸಂಬಂಧ ಪಶ್ಚಿಮದ ಬಂಡವಾಳಶಾಹೀ ದೇಶಗಳಲ್ಲಿ ವಿಶೇಷವಾಗಿ ಇಂಗ್ಲೆಂಡ್ ಹಾಗೂ ಕೆನಡಾದಲ್ಲಿ, ಹದಗೆಡುತ್ತಿರುವುದರ ಬಗ್ಗೆ ಅಧಿವೇಶನ ಆತಂಕ ವ್ಯಕ್ತಪಡಿಸುತ್ತದೆ. ಬ್ರಿಟನ್‌ಗೆ ಪ್ರವೇಶಿಸುವ ಭಾರತೀಯ ಮಹಿಳೆಯರು ಕಾಮಾರ್ಯ್ರ ಪರೀಕ್ಷೆಗೆ ಒಳಪಡಬೇಕೆಂದು ಹೇಳಿ ಅವಮಾನ ಪಡಿಸುವುದು, ಜನಾಂಗ ಭೇದ ನೀತಿಯವರೇ ಬಹುಸಂಖ್ಯೆಯಲ್ಲಿರುವ ಪೋಲೀಸ್ ಪಡೆಯನ್ನು ಜುಲೈ 1981 ರಲ್ಲಿ ನಡೆದ ದಂಗೆಗಳನ್ನು ನೆವವಾಗಿಟ್ಟುಕೊಂಡು ಮತ್ತಷ್ಟು ಬಲಪಡಿಸುವುದು, ಕರಿಯ ವರ್ಣದ ಅಲ್ಪಸಂಖ್ಯಾತ ಜನಾಂಗಗಳ ಮೇಲೆ ಹಿಂಸಾತ್ಮಕ ಆಕ್ರಮಣ ನಡೆಸುವುದು, ಅವರ ದೇಶಕ್ಕೆ ಮರಳಿ ಕಳಿಸುವುದು ಇತ್ಯಾದಿ ನಡೆಯುತ್ತಿದೆ. ಇತ್ತೀಚಿಗೆ ಕಾಮನ್‌ವೆಲ್ತ್‌ನ ಕರಿಯ ವಲಸೆಗಾರರು ಹಾಗೂ ಕೆನಡಾ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ನಂತಹ ಕಾಮನ್‌ವೆಲ್ತ್ ದೇಶಗಳ ವಲಸೆಗಾರರು, ಯೂರೋಪಿಯನ್ ನಾಗರಿಕರು ಇವರ ನಡುವೆ ತಾರತಮ್ಯ ನಡೆಸುವ 'ರಾಷ್ಟ್ರೀಯತೆಯ ಶಾಸನ'ವಾದ ಮೇಲೆ ಇಂತಹ ಆಕ್ರಮಣಗಳು ಹೆಚ್ಚಿವೆ. ಇತರ ವಲಸೆಗಾರರ ಸಂಘಟನೆಗಳೊಂದಿಗೆ ಹಾಗೂ ಬ್ರಿಟನ್ನಿನ ಪ್ರಜಾಪ್ರಭುತ್ವವಾದಿಗಳೊಂದಿಗೆ ವರ್ಣಭೇದದ ಶಕ್ತಿಗಳು ಹಾಗೂ ಶಾಸನಗಳ ವಿರುದ್ಧ ಹೋರಾಡುತ್ತಿರುವ 'ಭಾರತೀಯ ಕಾರ್ಮಿಕರ ಸಂಘ'ವನ್ನು ಅಧಿವೇಶನ ಅಭಿನಂದಿಸುತ್ತದೆ. ಭಾರತ ಸರ್ಕಾರ ಈ ಬಗ್ಗೆ ಸ್ಪಷ್ಟ ನಿಲುವು ತಳೆದು ಭಾರತೀಯರ ರಕ್ಷಣೆಗೆ ಯೋಗ್ಯ ಕ್ರಮ ಕೈಗೊಳ್ಳಬೇಕು.

ಆಫಘಾನಿಸ್ತಾನ

ಸಾವುರ್ ಕ್ರಾಂತಿ ಹಾಕಿಕೊಟ್ಟ ಮಾರ್ಗದಲ್ಲಿ ಆಫಘಾನಿಸ್ತಾನದ ಜನತೆಯನ್ನು ಮುನ್ನಡೆಸುತ್ತಿರುವ ಅಲ್ಲಿನ ಜನತಾ ಪ್ರಜಾಪ್ರಭುತ್ವವಾದೀ ಪಕ್ಷಕ್ಕೆ ಅಧಿವೇಶನ ಕ್ರಾಂತಿಕಾರೀ ಶುಭಾಶಯ ಕೋರುತ್ತದೆ.

ಆಫಘಾನಿಸ್ತಾನದಲ್ಲಿ ತನ್ನ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸುವಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಆಫಘಾನ್ ಸರ್ಕಾರಕ್ಕೆ ಸೋವಿಯತ್ ಸಂಘದ ಸಾಮೂಹಿಕ ಸಹಾಯದಿಂದಾಗಿ ಸಂಪೂರ್ಣ ವಿಫಲರಾದರೂ ವಾಸ್ತವತೆಯನ್ನು ಒಪ್ಪಲು ಅವರಿನ್ನೂ ಸಿದ್ಧರಿಲ್ಲ. ಬುಡಕಟ್ಟು ನಾಯಕರು ಹಾಗೂ ಭೂಮಾಲೀಕರಿಗೆ ಬುಡಮೇಲು ಕೃತ್ಯಗಳಲ್ಲಿ ತರಬೇತಿ ನೀಡಿ ಪಾಕಿಸ್ತಾನೀ ಮಣ್ಣಿನಿಂದ ಆಫಘಾನಿಸ್ತಾನದಲ್ಲಿ ಗಲಭೆ ನಡೆಸಲು ಅವರು ತಮ್ಮ ಪ್ರಯತ್ನ ಮುಂದುವರಿಸುತ್ತಿದ್ದಾರೆ.

ಸಾಮ್ರಾಜ್ಯಶಾಹೀ ಪ್ರೇರಿತ ಚಟುವಟಿಕೆಗಳನ್ನುಎದುರಿಸಿಯೂ ಕರ್ಮಾಲ್ ಸರ್ಕಾರ ಸ್ಥಿರಗೊಂಡು ಹೆಚ್ಚೆಚ್ಚು ಕ್ಷೇತ್ರಗಳಿಂದ ಪ್ರತಿಕ್ರಾಂತಿ ಶಕ್ತಿಗಳನ್ನು ಕಿತ್ತೆಸೆದು ಪ್ರಜಾತಾಂತ್ರಿಕವಾಗಿ ಆರ್ಥಿಕ ಮುನ್ನಡೆ ಸಾಧಿಸುತ್ತಿದೆ.

ವಾಪಸು ಪಡೆಯಲು ಅನುಕೂಲವಾದ ವಾತಾವರಣ ಸೃಷ್ಟಿಯಾದ ಕೂಡಲೇ ಅಂದರೆ ವಿದೇಶೀ ಪ್ರೇರಣೆಯ ಬುಡಮೇಲು ಚಟುವಟಿಕೆ ನಿಂತಾಗ ಸೋವಿಯತ್ ಸೇನೆ ವಾಪಸಾಗುವುದೆಂದು ಸೋವಿಯತ್ ಸಂಘ ಹಾಗೂ ಆಫಘಾನಿಸ್ತಾನ ಮತ್ತೆ ಮತ್ತೆ ಹೇಳಿದರೂ, ರಾಜಕೀಯ ಪರಿಹಾರವಾಗಿ ಪಾಕೀಸ್ತಾನ ಹಾಗೂ ಇರಾನ್ ಸರ್ಕಾರದೊಂದಿಗೆ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ಸಮ್ಮುಖದಲ್ಲಿ ಮಾತುಕತೆಗೆ ತಯಾರಿರುವುದಾಗಿ ಹೇಳಿದರೂ ಪಾಕೀಸ್ತಾನೀ ಮಿಲಿಟರಿ ಆಡಳಿತ ಹಿಂಜರಿಯುತ್ತಿದೆ.

ಆಂತರಿಕ ಪ್ರತಿ ಕ್ರಾಂತಿಕಾರಿಗಳು ಹಾಗೂ ಅವರ ವಿದೇಶೀ ಸಾಮ್ರಾಜ್ಯಶಾಹೀ ದಾತರ ವಿರುದ್ಧ ಹೋರಾಟಗಳಲ್ಲಿ ಆಫಘಾನಿಸ್ತಾನದ ಜನತೆಗೆ ಹಾಗೂ ಜನತಾ ಪ್ರಜಾಪ್ರಭುತ್ವವಾದೀ ಪಕ್ಷಕ್ಕೆ ಸಿ. ಪಿ. ಐ. (ಎಂ) ನ ಬೆಂಬಲವನ್ನು ಅಧಿವೇಶನ ಮತ್ತೊಮ್ಮೆ ವ್ಯಕ್ತಪಡಿಸಿ ಆರ್ಥಿಕ ವ್ಯವಸ್ಥೆಯನ್ನು ಹಾಗೂ ಸಮಾಜವನ್ನು ಹೊಸ ದಿಕ್ಕಿನಲ್ಲಿ ಪುನಃ ರಚಿಸುವ ಅವರ ಪ್ರಯತ್ನಗಳಿಗೆ ಶುಭ ಕೋರುತ್ತದೆ.

ಯುದ್ಧದ ಅಪಾಯ

ಜಗತ್ತನ್ನು ಅಣುವಿನಾಶದತ್ತ ದಬ್ಬಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಅಧಿವೇಶನ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ಈ ಅಪಾಯಕ್ಕೆ ಕಾರಣ ಅಮೆರಿಕಾದ ಸಾಮ್ರಾಜ್ಯಶಾಹೀ ಆಕ್ರಮಣಕಾರೀ ಧೋರಣೆಗಳು. ಸಮಾಜವಾದೀ ಜಗತ್ತಿನ ಪ್ರಗತಿಯನ್ನು ತಡೆಯಲು ಈ ಹಿಂದಿನ ವಸಾಹತುಶಾಹೀ ಜಗತ್ತಿನ ಮೇಲೆ ತನ್ನ ಹಿಡಿತವನ್ನು ಮತ್ತೊಮ್ಮೆ ಸಾಧಿಸಲು ಅದು ಹೀಗೆ ಏರುತ್ತಿದೆ. ಅದಕ್ಕಾಗಿ ಸೋವಿಯತ್ ಸಂಘದ ಮೇಲೆ ಸೈನಿಕ ಮೇಲ್ಮೆ ಸಾದಿಸುವ ಹೆಸರಲ್ಲಿ ಶಸ್ತ್ರಾಸ್ತ್ರ ಸೇರಿಸುತ್ತಿದೆ. ಸೀಮಿತ ನ್ಯೂಕ್ಲಿಯರ್ ಯುದ್ಧದ ಮಾತನ್ನಾಡುತ್ತಿದೆ ಇದು ಜಾಗೃತರಾದ ಜನತೆಯನ್ನು ಮೋಸಗೊಳಿಸುವ ಯತ್ನ. ಈ ಮೂಲಕ ಜಗತ್ತಿನ ಮೇಲೆ ಆಧಿಪತ್ಯ ಸಾಧಿಸುವ ತನ್ನ ಹಂಚಿಕೆಯನ್ನು ಅದು ಮರೆಮಾಚಲು ಯತ್ನಿಸುತ್ತಿದೆ. ಆದರೆ ಜಗತ್ತಿನ ಜನಪ್ರಿಯ ಶಕ್ತಿಗಳು ಯುದ್ಧದ ಗಂಭೀರ ವಿಷಯವನ್ನು ಮನಗಂಡಿವೆ. ಯೂರೋಪಿನ ಹಲವು ವರ್ಗಗಳಲ್ಲಿನ ಬೃಹತ್ ಮತ ಪ್ರದರ್ಶನಗಳು, ಮಹಿಳೆಯರ ಶಾಂತಿಯಾತ್ರೆ, ಯುದ್ಧ ಪ್ರವೃತ್ತಿಯನ್ನು ತಡೆಯಬೇಕೆಂಬ ಕಾರ್ಮಿಕ ವರ್ಗದ ನಿಲುವು ಆಕ್ರಮಣಕೋರರ ಮೇಲೆ ವಿಜಯ ಸಾಧಿಸಿಯೇ ತೀರುತ್ತದೆ. ಶಸ್ತ್ರಾಸ್ತ್ರ ಪೈಪೋಟಿಯಿಂದಾಗಿ ಆರ್ಥಿಕ ದುಃಸ್ಥಿತಿ ಉಂಟಾಗಿರುವುದನ್ನು ಅನುಭವಿಸಿರುವ ಅಮೆರಿಕಾದ ಜನತೆ ರೀಗನ್ ಆಡಳಿತದ ಯುದ್ಧ ಧೋರಣೆಯನ್ನು ಪ್ರತಿಭಟಿಸುತ್ತಿದೆ.

ಕಾರ್ಮಿಕ ವರ್ಗ ಹಾಗೂ ಎಲ್ಲಾ ಪ್ರಗತಿಶೀಲ ಶಕ್ತಿಗಳು ಈ ಗಂಭೀರ ಅಪಾಯವನ್ನು, ಸಾಮ್ರಾಜ್ಯಶಾಹೀ ಪಿತೂರಿಗಳನ್ನು ಬಯಲಿಗೆಳೆದು ಜಗತ್ತನ್ನು ಅಣುವಿನಾಶದಿಂದ ಉಳಿಸಬೇಕಾದುದು ಈಗ ಅತೀ ಅಗತ್ಯ ಎಂದು ಅಧಿವೇಶನ ಭಾವಿಸುತ್ತದೆ.

ದಕ್ಷಿಣ ಆಫ್ರಿಕಾ ಕುರಿತು

ಪ್ರಿಟೋರಿಯಾದಲ್ಲಿನ ವರ್ಣಭೇದ ನೀತಿಯ ಆಡಳಿತ ವಿರುದ್ಧ ತೀವ್ರ ಹೋರಾಟದಲ್ಲಿ ನಿರತರಾಗಿರುವ ನಮೀಬಿಯಾ ಹಾಗೂ ದಕ್ಷಿಣ ಆಫ್ರಿಕಾದ ವೀರ ಜನತೆಗೆ ಸಮ್ಮೇಳನದ ಶುಭಾಶಯಗಳು.

ಸಾಮ್ರಾಜ್ಯಶಾಹೀ ಶಕ್ತಿಗಳು ಸಂಯುಕ್ತರಾಷ್ಟ್ರ ಸಂಘದ ಆದೇಶಗಳಿಗೆ ವಿರುದ್ಧವಾಗಿ ಈ ವರ್ಣಭೇದ ನೀತಿಯ ಆಡಳಿತಕ್ಕೆ ಸರ್ವರೀತಿಯ ಬೆಂಬಲ ಕೊಡದಿರುತ್ತಿದ್ದರೆ ಈ ಶೋಷಿತ ಆಡಳಿತ ಎಂದೋ ಅಳಿದು ಹೋಗುತ್ತಿತ್ತು, ನಮೀಬಿಯಾ ಸ್ವತಂತ್ರವಾಗುತ್ತಿತ್ತು. ಈ ಸಾಮ್ರಾಜ್ಯಶಾಹೀ ಶಕ್ತಿಗಳನ್ನು, ವಿಶೇಷವಾಗಿ ಅಮೇರಿಕಾವನ್ನು, ಇದಕ್ಕಾಗಿ ಅಧಿವೇಶನ ಖಂಡಿಸುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯಕ್ಕೆ ವಿರುದ್ಧವಾಗಿ ನಮೀಬಿಯಾವನ್ನು ಅಕ್ರಮವಾಗಿ ಹಿಡಿದಿಟ್ಟುಕೊಂಡ ದಕ್ಷಿಣ ಆಫ್ರಿಕಾದ ಜನತೆಯ ಮೇಲೆ ಅಮಾನುಷ ದಬ್ಬಾಳಿಕೆ ನಡೆಸುತ್ತಿರುವ, ಅಂಗೋಲಾ ಹಾಗೂ ಮೊಜಾಂಬಿಕ್ ಮೇಲೆ ಆಗಾಗ ಆಕ್ರಮಣ ನಡೆಸುತ್ತಿರುವ ಜನಾಂಗ ಭೇದ ನೀತಿಯ ಪ್ರಿಟೋರಿಯಾ ಆಡಳಿತವನ್ನು ಅಧಿವೇಶನ ಬಲವಾಗಿ ಖಂಡಿಸುತ್ತದೆ.

ನಮೀಬಿಯಾದ ಸ್ವಾತಂತ್ರ್ಯ ಕುರಿತಂತೆ ಸಂಯುಕ್ತ ರಾಷ್ಟ್ರ ಸಂಘದ ಯೋಜನೆಯನ್ನು ಚಾಚೂ ತಪ್ಪದೆ ಪಾಲಿಸಬೇಕೆಂದು ಅಧಿವೇಶನ ಕರೆ ಕೊಡುತ್ತದೆ.

ದಕ್ಷಿಣ ಅಮೇರಿಕಾದಲ್ಲಿ

ದಕ್ಷಿಣ ಅಮೇರಿಕಾ ಖಂಡದ ದೇಶಗಳ ಜನತೆಯ ವಿರುದ್ಧ, ಅಲ್ಲಿನ ಪ್ರಗತಿಶೀಲ ಸರ್ಕಾರಗಳ ವಿರುದ್ಧ, ವಿಶೇಷವಾಗಿ ಸಮಾಜವಾದೀ ಕ್ಯೂಬಾದ ವಿರುದ್ಧ ಅಮೇರಿಕಾದ ಸಾಮ್ರಾಜ್ಯ ಶಾಹಿಗಳ ಉದ್ರೇಕಕಾರಿ ಚಟುವಟಿಕೆಗಳನ್ನು ಅಧಿವೇಶನ ಬಲವಾಗಿ ಖಂಡಿಸುತ್ತದೆ.

ಕ್ಯೂಬಾದ ಕ್ರಾಂತಿಯಾದಂದಿನಿಂದ ಕಳೆದ 22 ವರ್ಷಗಳಲ್ಲಿ ಅದರ ವಿರುದ್ಧ ಅಮೆರಿಕಾದ ಸಾಮ್ರಾಜ್ಯಶಾಹಿಗಳು ಸಾಧ್ಯವಿದ್ದ ಎಲ್ಲಾ ರೀತಿಯ ಆಕ್ರಮಕ ಚಟುವಟಿಕೆ ನಡೆಸಿಕೊಂಡು ಬಂದಿದ್ದಾರೆ. ಈಗ ನಿಕಾರಗುವಾ. ಕೆನಡಾದ ವಿರುದ್ಧವೂ ಅದನ್ನು ನಡೆಸುತ್ತಿದ್ದಾರೆ.

ಎಲ್‌ಸಾಲ್ವಡೋರ್‌ನಲ್ಲಿ ಕ್ರಾಂತಿಕಾರೀ ಗೆರಿಲ್ಲಾ ಹೋರಾಟದ ಮುನ್ನಡೆ ಲ್ಯಾಟಿನ್ ಅಮೆರಿಕಾದ ಬಹುಸಂಖ್ಯಾತ ದೇಶಗಳಲ್ಲಿ ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು, ಅಮೆರಿಕಾದ ಬೆದರಿಕೆ ಹಾಗೂ ಒತ್ತಡ, ಗ್ವಾಟೆಮಾಲಾದಲ್ಲಿ ಹೆಚ್ಚುತ್ತಿರುವ ಗೆರಿಲ್ಲಾ ಹೋರಾಟ, ನಿಕಾರಗುವಾದಲ್ಲಿ ಕ್ರಾಂತಿಕಾರೀ ಶಕ್ತಿಗಳ ಬಲವರ್ಧನೆ, ಸುರೀನಾಂನಲ್ಲಿ ವಿಶಾಲ ಕ್ರಾಂತಿಕಾರೀ ರಂಗ ರೂಪ ತಳೆದಿರುವುದು ಲ್ಯಾಟಿನ್ ಅಮೇರಿಕಾದ ಈಗಿನ ವಾತಾವರಣ. ಫ್ರಾನ್ಸ್, ಮೆಕ್ಸಿಕೊ ಹಾಗೂ ಕ್ಯೂಬಾ ಎಲ್‌ಸಾಲ್ವಡೋರ್‌ನ ಕ್ರಾಂತಿಕಾರಿ ಶಕ್ತಿಗಳನ್ನು ಆ ದೇಶದ ರಾಜಕೀಯ ಪ್ರತಿನಿಧಿಗಳೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು ಲ್ಯಾಟಿನ್ ಅಮೇರಿಕಾದ ಕ್ರಾಂತಿಕಾರಿ ಚಳುವಳಿಗೆ ಮತ್ತಷ್ಟು ಉತ್ತೇಜನ ನೀಡಿದೆ

ಇದನ್ನು ಕಂಡು ಭಯಭೀತರಾಗಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಲ್ಯಾಟಿನ್ ಅಮೇರಿಕಾದ ದೇಶಗಳಲ್ಲಿ ಮೂಗು ತೂರಿಸುವ ಚಟುವಟಿಕೆ ನಡೆಸುತ್ತಿದ್ದಾರೆ, ಚಿಲಿ, ವೆನೆಜುವೆಲಾ ಇತ್ಯಾದಿ ಕೆಲವು ದೇಶಗಳ ಪ್ರತಿಕ್ರಿಯಾವಾದಿ ಆಡಳಿತಗಳ ನೆರವು ಪಡೆಯುತ್ತಿದ್ದಾರೆ. ಆದರೆ ಈ ಆಡಳಿತಗಳು ತಮ್ಮ ದೇಶದಲ್ಲೇ ವಿರೋಧ ಎದುರಿಸುತ್ತಿವೆ.

ಕ್ಯೂಬಾದ ಹಾಗೂ ಲ್ಯಾಟಿನ್ ಅಮೇರಿಕಾದ ಇತರ ದೇಶಗಳ ಜನತೆಗೆ ಫ್ಯಾಸಿಸ್ಟ್ ಸರ್ವಾಧಿಕಾರಗಳ ಹಾಗೂ ಅವರ ಆಸರೆಗೆ ನಿಂತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಸೌಹಾರ್ದ ಹಾಗೂ ಬೆಂಬಲವನ್ನು ಅಧಿವೇಶನ ವ್ಯಕ್ತಪಡಿಸುತ್ತದೆ.

ಪಶ್ಚಿಮ ಬಂಗಾಳ ಚುನಾವಣೆಗಳು

ಮಾರ್ಚ್ 15, 1982 ರೊಳಗೆ ಪಶ್ಚಿಮ ಬಂಗಾಳದಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಬೇಕೆಂಬ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ನಿರ್ಧಾರವನ್ನು ಅಧಿವೇಶನ ಅನುಮೋದಿಸುತ್ತದೆ. ಸಂವಿಧಾನದಲ್ಲಿಯೇ ವಿಧಿಸಿರುವ ರೀತಿಯಲ್ಲಿ ಚುನಾವಣೆ ನಡೆಸಬೇಕೆಂದು ಮುಖ್ಯ ಚುನಾವಣಾ ಕಮೀಶನರನ್ನು ಒತ್ತಾಯಿಸುತ್ತದೆ.

ಎಡರಂಗ ಸರಕಾರದ ವಿರುದ್ಧ ತನ್ನ ಆಪಾದನೆಗಳನ್ನು ಜನರ ಮುಂದಿಡುವ ತಕ್ಷಣದ ಅವಕಾಶವನ್ನು ಉಪಯೋಗಿಸಿಕೊಳ್ಳುವ ಬದಲು ಕಾಂಗ್ರೆಸ್ (ಐ) ಚುನಾವಣೆಯನ್ನು ಮುಂದೂಡಲು ಸಾಧ್ಯವಿದ್ದದ್ದನ್ನೆಲ್ಲಾ ಮಾಡುತ್ತಿದೆ. ಪಂಚಾಯತ್ ಚುನಾವಣೆಗಳಲ್ಲಿ ಸೋತ ಮೇಲೆ ಮುನಿಸಿಪಲ್ ಚುನಾವಣೆಗಳನ್ನು ಎದುರಿಸಲು ಅವರಿಗೆ ಧೈರ್ಯವಾಗಲಿಲ್ಲ. ನವಂಬರ್ ಉಪಚುನಾವಣೆಗಳಲ್ಲಿ ಎಡರಂಗ ಗಳಿಸಿದ ವಿಜಯದಿಂದ ಕಾಂಗ್ರೆಸ್ (ಐ) ಮತ್ತಷ್ಟು ಭೀತಗೊಂಡಿದೆ. ಜತೆಗೆ ರಸ್ತೆಗಳ ಮೇಲೆ ಒಬ್ಬರನ್ನೊಬ್ಬರು ಕೊಲೆ ಮಾಡಿಕೊಳ್ಳುವ ಹಂತ ತಲುಪಿರುವ ಅವರ ಆಂತರಿಕ ಕಚ್ಚಾಟಗಳಿಂದ ಜನತೆಯ ಕಣ್ಣಲ್ಲಿ ತುಚ್ಛೀಕಾರಕ್ಕೊಳಗಾಗಿದೆ. ಆದ್ದರಿಂದ ಚುನಾವಣೆ ಎದುರಿಸುವ ಶಕ್ತಿ ಅದಕ್ಕಿಲ್ಲ.

ಚುನಾವಣೆಗಳನ್ನು ಮುಂದೂಡಿ ರಾಷ್ಟ್ರಪತಿ ಆಡಳಿತ ಹೇರಿ 1972 ರಂತೆ ಮೋಸದ ಚುನಾವಣೆ ನಡೆಸಲು ಕಾಂಗ್ರೆಸ್ (ಐ) ನಾಯಕರ ಪ್ರಯತ್ನ. ಸರ್ವಾಧಿಕಾರದ ವಿರುದ್ಧ ನಿಂತಿರುವ ಶಕ್ತಿಗಳು ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನಗೊಳಿಸುವ ಈ ಪ್ರಯತ್ನಗಳನ್ನು ವಿಫಲಗೊಳಿಸುತ್ತವೆ ಎಂಬ ಭರವಸೆ ಅಧಿವೇಶನಕ್ಕಿದೆ.

ಸರ್ಕಾರ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಹಾಗೂ ಯಶಸ್ವಿಯಾಗಿ ಜಾರಿಗೊಳಿಸಿ ಪಶ್ಚಿಮ ಬಂಗಾಳದ ದುಡಿಯುವ ಜನತೆಯ ಪ್ರೀತಿಪಾತ್ರರಾದುದಕ್ಕಾಗಿ ಎಡರಂಗ ಸರ್ಕಾರವನ್ನು, ಸಿ. ಪಿ. ಐ. (ಎಂ) ನ ಪಶ್ಚಿಮ ಬಂಗಾಳ ಘಟಕವನ್ನು ಹಾಗೂ ರಂಗದ ಇತರ ಅಂಗ ಪಕ್ಷಗಳನ್ನು ಅಭಿನಂದಿಸುತ್ತದೆ.

ಚುನಾವಣೆಗಳನ್ನು ಮಾರ್ಚ್‌ನಲ್ಲಿ ನಡೆಸಬೇಕೆಂಬ ಪಶ್ಚಿಮ ಬಂಗಾಳ ಸರಕಾರದ ಕೇಳಿಕೆಗೆ ಹಲವು ವಿರೋಧ ಪಕ್ಷಗಳು ಹಾಗೂ ರಾಷ್ಟ್ರೀಯ ವೃತ್ತ ಪತ್ರಿಕೆಗಳು ಬೆಂಬಲಿಸಿರುವುದನ್ನು ಅಧಿವೇಶನ ತೃಪ್ತಿಯಿಂದ ಗಮನಿಸಿದೆ. ಕಾಂಗ್ರೆಸ್ (ಐ) ನ ವಿರೋಧಗಳನ್ನು ಬದಿಗೆ ತಳ್ಳಿ ಚುನಾವಣೆ ನಡೆಸುವಂತೆ ಎಡರಂಗ ಸರಕಾರದ ನಿರ್ಧಾರಕ್ಕೆ ಬೆಂಬಲ ಸೂಚಿಸಲು ಅಧಿವೇಶನ ಮನವಿ ಮಾಡುತ್ತದೆ.

ಕೇರಳ ಕುರಿತು

ಕಾಂಗ್ರೆಸ್ (ಐ) ಮತ್ತು ಅದರ ಕೇಂದ್ರ ಸರ್ಕಾರ ಕಾಂಗ್ರೆಸ್ (ಎಸ್) ನ ಎ. ಕೆ. ಆಂತೋಣಿ ನಾಯಕತ್ವದ

೧೧ನೇ ಅಧಿವೇಶನದ ಠರಾವುಗಳು

ಪಶ್ಚಾಂತರಿ ಬಂಡುಕೋರರ ಗುಂಪಿನ ಸಹಾಯದಿಂದ ನಡೆಸಿದ ಪಿತೂರಿಯಿಂದಾಗಿ 21 ತಿಂಗಳು ಸುಯೋಗ್ಯ ಅಸ್ತಿತ್ವದಲ್ಲಿದ್ದ ಕೇರಳ ಸರ್ಕಾರ ರಾಜೀನಾಮೆ ಕೊಟ್ಟಿತು. ಅಂತೋಣಿ ಹಾಗೂ ಇತರರು ತಮ್ಮ ಹೀನ ವಿಶ್ವಾಸ ಘಾತವನ್ನು ಸಮರ್ಥಿಸಿಕೊಳ್ಳಲು ಪಟ್ಟಭದ್ರ ಹಿತಾಸಕ್ತಿಗಳ ವಾದಗಳನ್ನೇ ಪ್ರತಿಧ್ವನಿಸಿದ್ದಾರೆ ದುಡಿಯುವ ಜನತೆಯ ಹೋರಾಟಗಳನ್ನು ದಮನ ಮಾಡಲು ಈ ಹಿತಾಸಕ್ತಿಗಳಿಗೆ ಎಡ ಪ್ರಜಾಪ್ರಭುತ್ವ ಸರ್ಕಾರ ಅವಕಾಶ ಕೊಡಲಿಲ್ಲವಾದ್ದರಿಂದ ಅವರಿಗೆ ಸರ್ಕಾರದ ಮೇಲೆ ಸಿಟ್ಟು ಬಂದಿತ್ತು. ಅಲ್ಲದೆ ಅವರು ಈ ತಂತ್ರಗಳ ಮೂಲಕ ಆರ್.ಎಸ್.ಎಸ್. ಹಾಗೂ ಕಾಂಗ್ರೆಸ್ (ಐ) ಗೂಂಡಾಗಳು ಸಿ. ಪಿ. ಐ. (ಎಂ) ಹಾಗೂ ಸಿ. ಐ, ಟಿ. ಯು ಕಾರ್ಯಕರ್ತರ ಮೇಲೆ ನಡೆಸಿರುವ ಮರಣಾಂತಿಕ ಹಲ್ಲೆಗಳನ್ನು ಮರೆಮಾಚುತ್ತಿದ್ದಾರೆ.

ಇಷ್ಟೆಲ್ಲಾ ಆಟ ಹೂಡಿದರೂ ಕಾಂಗ್ರೆಸ್ (ಐ) ನೇತೃತ್ವದ ಬಲಪಂಥೀಯ ಕೂಟ ಗಳಿಸಲು ಸಾಧ್ಯವಾದದ್ದು 141 ರಲ್ಲಿ 67 ಸದಸ್ಯರ ಬೆಂಬಲ. ಇಂತಹಪರಿಸ್ಥಿತಿಯಲ್ಲಿ ವಿಧಾನ ಸಭೆಯನ್ನು ವಿಸರ್ಜಿಸುವುದು ರಾಜ್ಯಪಾಲರ ಕರ್ತವ್ಯವಾಗಿತ್ತು. ಆದರೆ ಕಾಂಗ್ರೆಸ್ (ಐ) ಮತ್ತು ಕೇಂದ್ರ ಸರಕಾರದ ಮರ್ಜಿಗನುಸಾರವಾಗಿ ರಾಜ್ಯಪಾಲರು ರಾಷ್ಟ್ರಪತಿ ಆಡಳಿತ ಶಿಫಾರಸು ಮಾಡಿದರು. ಕೇವಲ 17 ಸದಸ್ಯರಿರುವ ಕಾಂಗ್ರೆಸ್ (ಐ) ರಾಜಕೀಯ ದುರ್ವ್ಯಾಪಾರ ನಡೆಸುವ ನೀಚ ಪ್ರಯತ್ನ ನಡೆಸಲು ಈ ತಂತ್ರ. ಬಹುಮತ ಗಳಿಸುವುದು ಕರುಣಾಕರನ್‌ರವರಿಗಾಗಲಿಲ್ಲ. ಆದರೂ ಕಳೆದ ಚುನಾವಣೆಯಲ್ಲಿ ನಿರ್ಣಾಯಕವಾಗಿ ಪರಾಜಿತಗೊಂಡ ಕಾಂಗ್ರೆಸ್ (ಐ) ಗೆ ಸರ್ಕಾರ ರಚಿಸಲು ಅವಕಾಶ ಕೊಡಲಾಯಿತು. ಇದು ಸಂವಿಧಾನ ಕೊಟ್ಟಿರುವ ರಾಜ್ಯಪಾಲರ ಅಧಿಕಾರಗಳ ಸರಾಸಗಟು ದುರುಪಯೋಗ. ಇದನ್ನು ಸರ್ವಾಧಿಕಾರೀ ಪ್ರವೃತ್ತಿಯ ಸೂಚಕವೆಂದು ಅಧಿವೇಶನ ರಾಜ್ಯಪಾಲರ ಅಧಿಕಾರದ ದುರುಪಯೋಗವನ್ನು ಖಂಡಿಸುತ್ತದೆ.

ತಮ್ಮ ದುರ್ವ್ಯಾಪಾರದ ಚಟುವಟಿಕೆಗಳೆಲ್ಲಾ ವಿಫಲವಾಗಿರುವಾಗ ಈ ಬಲಪಂಥೀಯ ರಂಗದ ನಾಯಕರೂ ಚುನಾವಣೆಯ ಬಗ್ಗೆ ಸೂಚನೆ ಕೊಡಲಾರಂಭಿಸಿದ್ದಾರೆ. ಮುಂದಿನ ಚುನಾವಣೆಯ ಸಮಯದಲ್ಲಿ ಅಧಿಕಾರದಲ್ಲಿರಲು ಪ್ರಯತ್ನಿಸುತ್ತಿದ್ದಾರೆ. ಜನತಾ ಪಕ್ಷದ ಅಖಿಲ ಭಾರತ ನಾಯಕರು ಕಾಂಗ್ರೆಸ್ (ಐ) ನೇತೃತ್ವದ ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ದನಿಯೆತ್ತಿ ಮಾತನಾಡಿದರೂ ಕೇರಳದ ಅವರ ಐದು ಎಂ ಎಲ್. ಎ. ಗಳ ಪಾತ್ರದ ಬಗ್ಗೆ ಹಿಂದೆ–ಮುಂದೆ ನೋಡುತ್ತಿದ್ದಾರೆ. ಇದು ಕಾಂಗ್ರೆಸ್ (ಐ) ನ ಮಾಯವಾಗುತ್ತಿರುವ ನಿರೀಕ್ಷೆಗೆ ಮತ್ತೆ ಜೀವ ತುಂಬುತ್ತಿದೆ.

ಎಡ-ಪ್ರಜಾಪ್ರಭುತ್ವ ರಂಗದ ರಾಜೀನಾಮೆಯ ನಂತರದ ಅಲ್ಪ ಕಾಲಾವಧಿಯಲ್ಲಿಯೇ ಪೋಲೀಸ್ ಹಾಗೂ ಗೂಂಡಾ ಆಡಳಿತವನ್ನು ಹರಿಯ ಬಿಡಲಾಗಿದೆ. ಈ ಅವದಿಯಲ್ಲಿ 25 ಕ್ಕಿಂತ ಹೆಚ್ಚು ಸಿ. ಪಿ, ಐ. (ಎಂ) ಹಾಗೂ ಸಿ. ಐ. ಟಿ. ಯು ಕಾರ್ಯಕರ್ತರ ಕೊಲೆಯಾಗಿದೆ. ನಯನಾರ್ ಮಂತ್ರಿ ಮಂಡಳದ ಕಾಲದಲ್ಲಿ ಕಣ್ಮರೆಯಾಗಿದ್ದ ಜೈಲು ಹಿಂಸೆ ಮತ್ತೆ ತಲೆಯೆತ್ತಿದೆ. ಜನವರಿ 19 ರ ಸಾಮೂಹಿಕ ಮುಷ್ಕರದ ವಿರುದ್ಧ ವ್ಯಾಪಕ ಪೋಲೀಸ್ ಕಾರ್ಯಾಚರಣೆ, ವಿಶ್ವವಿದ್ಯಾಲಯದ ಸೆನೆಟ್ ಭವನ ಹಾಗೂ ಆವರಣದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಸಿದ ಭಯಾನಕ ಪ್ರಹಾರ ಕೇರಳದ ಜನತೆ ಭವಿಷ್ಯದಲ್ಲಿ ಏನೇನು ಅನುಭವಿಸಬೇಕಾಗಿದೆ ಎಂಬುದರ ಮುನ್ಸೂಚನೆ. ಈ ನಡುವೆ ಕೃಷಿ ಕೂಲಿಗಾರರಿಗೆ ವಿರಾಮ ವೇತನ, ಯುವಕರಿಗೆ ನಿರುದ್ಯೋಗ ಸಂಬಳ ಇತ್ಯಾದಿ ಪರಿಹಾರ ಹಾಗೂ ಸುಧಾರಣಾಕ್ರಮಗಳು ಕರುಣಾಕರನ್‌ರ ಕೊಡಲಿಯೇಟು ಪಡೆಯುವುದರಲ್ಲಿವೆ.

ಪೋಲೀಸ್ ಧೋರಣೆಯ ಬದಲಾವಣೆ, ಎಡ ಪ್ರಜಾಪ್ರಭುತ್ವ ಸರ್ಕಾರದ ಪರಿಹಾರ ಹಾಗೂ ಸುಧಾರಣಾ ಕ್ರಮಗಳನ್ನು ರದ್ದುಪಡಿಸುವುದನ್ನು ಸಮ್ಮೇಳನ ಖಂಡಿಸುತ್ತದೆ. ಅಲ್ಪ ಮತ ಸರಕಾರ ರಾಜೀನಾಮೆ ಕೊಟ್ಟು ತಕ್ಷಣ ಚುನಾವಣೆ ನಡೆಯಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ. ●

ರೈತ ಸಂಘದ ಉದ್ಘಾಟನೆ

22-2-82 ರಂದು ಪುತ್ತೂರು ತಾಲ್ಲೂಕು ಪಡುವನ್ನೂರು ಗ್ರಾಮದ ಸುಳ್ಯ ಪದವಿನಲ್ಲಿ ರೈತ ಸಂಘದ ನೂತನ ಘಟಕವನ್ನು ಪ್ರಾರಂಭಿಸಲಾಯಿತು.

ಈ ಕುರಿತು ನಡೆದ ಸಭೆಯ ಅಧ್ಯಕ್ಷತೆಯನ್ನು ಕಾಂ। ಕೆ. ನಾರಾಯಣ ಬಂಗೇರ ಅವರು ವಹಿಸಿದ್ದು ಮುಖ್ಯ ಅತಿಥಿಗಳಾಗಿ ಕಾಂ। ಬಿ. ರಾಮಕೃಷ್ಣಪ್ಪನವರು ಉಪಸ್ಥಿತರಿದ್ದರು. ಆರಂಭದಲ್ಲಿ ಕಾಂ। ಪೂವಪ್ಪನವರು ಸ್ವಾಗತಿಸಿದರು.

ರೈತ ಸಂಘದ ನೂತನ ಘಟಕಕ್ಕೆ ಅಧ್ಯಕ್ಷರಾಗಿ ಕಾಂ। ಕೆ. ನಾರಾಯಣ ಬಂಗೇರ, ಉಪಾಧ್ಯಕ್ಷರಾಗಿ ಕಾಂ।ಎಸ್. ಮ್ಯೊದುಕುಂಞ, ಕಾರ್ಯದರ್ಶಿಯಾಗಿ ಕಾಂ। ತ್ಯಾಂಪಣ್ಣ ಮೂಲ್ಯ, ಉಪ ಕಾರ್ಯದರ್ಶಿಯಾಗಿ ಕಾಂ। ಪೂವಪ್ಪ ಮೂಲ್ಯ, ಕೋಶಾಧಿಕಾರಿಯಾಗಿ ಕಾಂ। ಕೃಷ್ಣ ಭಂಡಾರಿ ಮತ್ತು 9 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

" ಕರ್ನಾಟಕ ರಾಜ್ಯದಲ್ಲಿ ರೈತ ಚಳುವಳಿ "

(3ನೇ ಪುಟದಿಂದ)

ಕೆಗೆ ಬೆಂಬಲವೀಯುವಾಗ, ಈ ಬೇಡಿಕೆ ಮತ್ತು ಹೋರಾಟವನ್ನು ಭೂ ಮಾಲೀಕರು ಮತ್ತು ಶ್ರೀಮಂತ ರೈತರಿಗೇ ಬಿಟ್ಟು ಕೊಟ್ಟರೆ ದೊಡ್ಡ ಸಂಖ್ಯೆಯಲ್ಲಿರುವ ಬಡ ಮತ್ತು ಸಣ್ಣ ರೈತರು ಶ್ರೀಮಂತ ರೈತ ಮತ್ತು ಭೂಮಾಲೀಕ ವರ್ಗಗಳ ಪ್ರಭಾವಕ್ಕೆ ಬರುತ್ತಾರೆ. ಅದನ್ನು ತಪ್ಪಿಸುವ ದೃಷ್ಟಿಯಿಂದ ಕಾರ್ಮಿಕ ವರ್ಗದ ಪಕ್ಷ ಮತ್ತು ಎಡ ಶಕ್ತಿಗಳು ಈ ಬೇಡಿಕೆಯನ್ನು ತೆಗೆದುಕೊಳ್ಳಬೇಕು. ಅದೇ ಸಂದರ್ಭ ಬಡ ರೈತರ ಮತ್ತು ಕೃಷಿ ಕೂಲಿಗಾರರ ಬೇಡಿಕೆಗಳನ್ನು ಸೇರಿಸಿಕೊಳ್ಳಬೇಕು. ಆಗ ಹಳ್ಳಿಯ ಬಡವರ ಒಗ್ಗಟ್ಟು ಬೆಳೆಯುವುದು ಸಾಧ್ಯವಿದೆ.

ಶ್ರೀಮಂತ ರೈತರಿಗೆ ಲಾಭವಾಗುವುದು ಎಂಬ ಕಾರಣದಿಂದ ಮೇಲೆ ಹೇಳಿರುವ ಅಂಶವನ್ನು ಕಡೆಗಣಿಸಿದರೆ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಭಾಗವಹಿಸುವ ಶಕ್ತಿಗಳನ್ನು ತುಂಡು ಮಾಡಿದಂತಾಗುತ್ತದೆ. ಗುತ್ತೆದಾರಿ ಬಂಡವಾಳಗಾರ ಮತ್ತು ದೊಡ್ಡ ಭೂ ಮಾಲೀಕರ ಪರವಾಗಿರುವ ಸರ್ಕಾರದ ವಿರುದ್ಧ ಗ್ರಾಮೀಣ ಪ್ರದೇಶದ ಜನತೆಯು ಒಂದಾಗಿ ಹೋರಾಡುವಾಗ, ಅದರ ಇತಿಮಿತಿಗಳನ್ನು ಅರಿತುಕೊಂಡು, ಅದರಲ್ಲಿ ಭಾಗವಹಿಸುವುದರ ಮೂಲಕ ಅದನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಬೇಕೇ ಹೊರತು, ಅದನ್ನು ಮೊಟಕುಗೊಳಿಸುವುದಲ್ಲ.

ಅಂತಹ ಹೋರಾಟಗಳಿಗೆ ಬೆಂಬಲ ಕೊಡುವ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ವೈರುಧ್ಯಗಳು, ಬೇರೆ ಬೇರೆ ರೈತ ವಿಭಾಗದ ಮಧ್ಯೆ ಇರುವ ವೈರುಧ್ಯಗಳು ಮತ್ತು ರೈತರು ಹಾಗೂ ಕೃಷಿ ಕೂಲಿಗಾರರ ಮಧ್ಯೆ ಇರುವ ವೈರುಧ್ಯಗಳನ್ನು ಅರಿತುಕೊಂಡು, ಗ್ರಾಮೀಣ ದುಡಿಯುವ ವರ್ಗವನ್ನು ಒಂದು ಸೇರಿಸುವತ್ತ ಮುನ್ನಡೆಯಬೇಕು. ಗ್ರಾಮಾಂತರ ಪ್ರದೇಶದಲ್ಲಿನ ಜನತೆಯ ಹತ್ತಾರು ಸಮಸ್ಯೆಗಳ ಬಗ್ಗೆ ಹೋರಾಟಗಳನ್ನು ಸಂಘಟಿಸುತ್ತಾ ಹೋರಾಟದ ಎಲ್ಲ ಪ್ರವಾಹಗಳನ್ನು ಒಂದು ಸೇರಿಸುವುದಕ್ಕೆ ಪ್ರಯತ್ನಿಸಬೇಕು. ಸರಿಯಾದ ವರ್ಗ ಸಂಬಂಧವನ್ನು ಕಲ್ಪಿಸುವುದರ ಮೂಲಕ ಹಳ್ಳಿಯ ದುಡಿಯುವ ಜನ ವಿಭಾಗವನು ಸಂಘಟಿಸಿ ಕ್ರಾಂತಿಕಾರಿ ಬದಲಾವಣೆಗಾಗಿ, ಮೇಲ್ಮಟ್ಟದ ಹೋರಾಟಗಳನ್ನು ನಡೆಸಲು ತಯಾರಿ ಮಾಡುವುದೇ ಗುರಿಯಿರಬೇಕು,

ಗ್ರಾಮೀಣ ಪ್ರದೇಶದ ಅತ್ಯಂತ ಬಡ ಜನರು, ಭೂರಹಿತ ಕೃಷಿ ಕೂಲಿಗಾರರಲ್ಲಿ ಹೆಚ್ಚಿನವರು, ಸಾಮಾಜಿಕವಾಗಿ ಅತ್ಯಂತ ತುಳಿಯಲ್ಪಟ್ಟವರು ಆಗಿದ್ದು ಬಡ ರೈತ ಮತ್ತು ಕೃಷಿ ಕೂಲಿಗಾರರ ಸಂಘಟಿತ ಹೋರಾಟವು ಸಾಮಾಜಿಕ ಅನ್ಯಾಯವನ್ನು ಪ್ರತಿಭಟಿಸುವ ಹೋರಾಟವೂ ಆಗಿ ಬೆಳೆಯಬಲ್ಲದು. ಸಂಘಟಿತ ಹೋರಾಟಗಳ ಮೂಲಕ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ ಅವರು ಕ್ರಾಂತಿಕಾರಿ ಹೋರಾಟದ ಮುಂಚೂಣಿಗೆ ಬರುವಂತೆ ಮಾಡುವುದು ಆಗತ್ಯ.

ಅನುಕೂಲ ಪರಿಸ್ಥಿತಿ

ಗ್ರಾಮೀಣ ಪ್ರದೇಶದಲ್ಲಿ ಜನತೆಯಲ್ಲಿ ಅತೃಪ್ತಿ ಮತ್ತು ಹೋರಾಟದ ಮನೋಭಾವನೆಗಳು ದಿನೇ ದಿನೇ ಹೆಚ್ಚುತ್ತಿವೆ. ಗ್ರಾಮಮಟ್ಟದಿಂದಲೇ ಕಟ್ಟಿ ಬೆಳೆಸಿರುವ, ರಾಜ್ಯ ವ್ಯಾಪಿಯಾಗಿರುವ ಮತ್ತು ಸರಿಯಾದ ಕ್ರಾಂತಿಕಾರಿ ದೃಷ್ಟಿಕೋನವನ್ನಿರಿಸಿಕೊಂಡಿರುವ ಹೋರಾಟಗಾರ ಸಂಘಟನೆಯ ಅಭಾವ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಮಂದಿಯ ಸಂಪರ್ಕ ಬೆಳೆಯುತ್ತಿದೆ. ಈ ಹಿಂದಿನ ಸಂಘಟನೆ ಮತ್ತು ಹೋರಾಟಗಳ ಅನುಭವವೂ ಇದೆ. ಇವೆಲ್ಲವೂ ಸಂಘಟನೆಯನ್ನು ಕಟ್ಟಲು ಅನುಕೂಲ ಪರಿಸ್ಥಿತಿಯನ್ನು ಉಂಟುಮಾಡಿವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೇರೆ ಬೇರೆ ಸ್ಥಳ ಮತ್ತು ವರ್ಗಗಳಿಗೆ ಸೇರಿರುವ, ಪರಸ್ಪರ ವೈಧ್ಯರುಗಳಿಂದ ಸೇರಿರುವ ಗ್ರಾಮೀಣ ಜನತೆಯನ್ನು ಸಂಘಟಿಸುವುದು ಅತ್ಯಂತ ಕಷ್ಟದ ಕೆಲಸವಾಗಿದೆ.

ಅನುಕೂಲ ಮತ್ತು ಪ್ರತಿಕೂಲ ಪರಿಸ್ಥಿತಿಗಳನ್ನು ಅಂದಾಜು ಮಾಡಿ, ಹೋರಾಟದ ಅನುಭವಗಳನ್ನು, ವ್ಯಾಪಕವಾಗಿ ಬೆಳೆಯುತ್ತಿರುವ ಚಟುವಟಿಕೆಗಳನ್ನು ಕ್ರೋಢೀಕರಿಸಿ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಪ್ರಬಲ ಚಳುವಳಿಗಳನ್ನು ಸಂಘಟಿಸಬೇಕಾಗಿದೆ. ರೈತ ಮತ್ತು ಕೃಷಿ ಕೂಲಿಗಾರರ ಹೋರಾಟಗಳ ಎಲ್ಲ ಪ್ರವಾಹಗಳನ್ನು ಜೋಡಿಸಿ, ಕಾರ್ಮಿಕ ವರ್ಗದೊಂದಿಗೆ ಸಖ್ಯತೆ ಮತ್ತು ಕಾರ್ಮಿಕ ವರ್ಗದ ಬೆಂಬಲದೊಂದಿಗೆ ರಾಜ್ಯದಾದ್ಯಂತ ಹೋರಾಟಗಳನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕು. ಸ್ವತಂತ್ರ ಮತ್ತು ಜಂಟೀ ಕಾರ್ಯಕ್ರಮಗಳ ಮೂಲಕ ಪ್ರಜಾಪ್ರಭುತ್ವ ಚಳುವಳಿಗಳನ್ನು ಬೆಳೆಸಬೇಕು. ಇದಕ್ಕೆಲ್ಲಾ ನೇತೃತ್ವವನ್ನೀಯಲು ಸಾಧ್ಯವಾಗುವ ರಾಜ್ಯಮಟ್ಟದ ಸಮರ್ಥ ಮುಖಂಡತ್ವವನ್ನು ರೂಪಿಸಬೇಕು. ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ 1982ನೇ ಮಾರ್ಚಿ 11 ರಿಂದ 14ರ ವರೆಗೆ ನಡೆಯಲಿರುವ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಮತ್ತು ಅದೇ ಸಂದರ್ಭ ಅಲ್ಲೇ ಸೇರಲಿರುವ ಕೃಷಿ ಕೂಲಿಗಾರರ ಸಮಾವೇಶಗಳು ಈ ದಿಶೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ●

ಚಂದಾ ವಿವರ

ಬಿಡಿ ಪ್ರತಿ	:	60 ಪೈಸೆ
6 ತಿಂಗಳಿಗೆ	:	15 ರೂ.
ವಾರ್ಷಿಕ ಚಂದಾ	:	30 ರೂ.

ಪಡುಬಿದ್ರಿಯಲ್ಲಿ

ಭೂಮಾಲೀಕರ ದೌರ್ಜನ್ಯ : ಗೇಣಿದಾರರ ಮೇಲೆ ಹಲ್ಲೆ

ಗುಂಡೂರಾಯರ ಆಳ್ವಿಕೆಯಲ್ಲಿ ಬಡ ಜನತೆಗೆ ನೆಮ್ಮದಿಯಿಲ್ಲ. ಎಲ್ಲೆಲ್ಲೂ ದೌರ್ಜನ್ಯ, ಹಲ್ಲೆಗಳು ನಡೆಯುತ್ತಿವೆ. ಗೂಂಡಾಗಳು ಚಾಕೂ ಚೂರಿ ಹಿಡಿದು ನಿರ್ಭಯರಾಗಿ ತಿರುಗಾಡುತ್ತಿದ್ದಾರೆ. ಇವರಾರೂ ಪೋಲೀಸರ ಕಣ್ಣಿಗೆ ಬೀಳುತ್ತಲೇ ಇಲ್ಲ.

ದ.ಕ.ಜಿಲ್ಲೆಯ ಪಡುಬಿದ್ರಿಯಲ್ಲಿ ಭೂಮಾಲೀಕರಿಂದ ಗೇಣಿದಾರರ ಮೇಲೆ ಅಮಾನುಷ ಹಲ್ಲೆ ನಡೆದಿದೆ. ಈ ಪ್ರಕರಣವನ್ನು ಉಡುಪಿಯ 'ಬಯಲು' ಪತ್ರಿಕೆ ವರದಿ ಮಾಡಿದೆ. ಈ ವರದಿಯ ಸಾರಾಂಶ ಇಂತಿದೆ;

4-2-82 ರಂದು ಮಧ್ಯಾಹ್ನ 3-30ಕ್ಕೆ ಪಡುಬಿದ್ರಿಯಲ್ಲೊಂದು ಬಡವರು ಬಂಡೇಳುವಂತಹ ದಾಂಧಲೆಯೊಂದು ನಡೆಯಿತು. ಬಡ ಗೇಣಿದಾರಳಾದ ಶ್ರೀಮತಿ ನಾಗಿ ಪೂಜಾರ್ತಿ ಎಂಬುವಳು ಪಾಂದೆ ತೋಟ ಎಂಬಲ್ಲಿ ಸುಮಾರು ವರ್ಷಗಳಿಂದಲೂ ಶ್ರೀಮತಿ ಗುಲಾಬಿ ಶೆಡ್ತಿ ಎಂಬುವವರ ಒಕ್ಕಲಾಗಿದ್ದಾಳೆ. ನಾಗಿ ಪೂಜಾರ್ತಿ ಸಾಗುವಳಿ ಮಾಡುತ್ತಿದ್ದ ಭೂಮಿಯ ಕುರಿತು ವಿವಾದವಿತ್ತೆಂದು ತಿಳಿದು ಬರುತ್ತದೆ. ಉಡುಪಿಯ 15ನೇ ಭೂನ್ಯಾಯ ಮಂಡಳಿಯು ಒಕ್ಕಲಿಗೆ ನೋಟೀಸು ಕೊಡದೆ ಭೂಮಾಲೀಕರ ಪರವಾಗಿ ಹೇಳಿಕೆ ಪಡೆದುಕೊಂಡು ಸದ್ರಿ ಜಮೀನನ್ನು ಭೂಮಾಲೀಕರ ಪರವಾಗಿ ತೀರ್ಮಾನ ಮಾಡಿರುತ್ತದೆ. ಈ ಬಗ್ಗೆ ನಾಗಿ ಪೂಜಾರ್ತಿಯವರು ಹೈಕೋರ್ಟಿನಿಂದ ತಡೆಯಾಜ್ಞೆ ಕೂಡ ತಂದಿದ್ದಾರೆ."

"ಇದರಿಂದಾಗಿ ಕೋಪಗೊಂಡ ಭೂಮಾಲೀಕರ ಮಗನಾದ ಅನಿಲ್ ಕುಮಾರ್ ಶೆಟ್ಟಿ (ಶೆಟ್ಟಿ ಆರ್ಟ್ಸ್ ಸ್ಟುಡಿಯೋ ಮಂಗಳೂರು) ಎಂಬುವನನ್ನು ಸುಮಾರು 30 ಜನ ಗೂಂಡಾಗಳನ್ನು ಕಾರು, ರಿಕ್ಷಾಗಳಲ್ಲಿ ಕರೆದುಕೊಂಡು ಬಂದು ನಾಗಿ ಪೂಜಾರ್ತಿ ತನ್ನ ಮನೆಯಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ ಹಲ್ಲೆ ನಡೆಸಿದ್ದಾನೆ ದೊಣ್ಣೆ-ಚೂರಿ, ಕೋಲುಗಳಿಂದ ನಾಗಿ ಪೂಜಾರ್ತಿಯನ್ನು ಥಳಿಸಲಾಗಿದೆ. ಅವರ ಬೊಬ್ಬೆ ಕೇಳಿ ಸುತ್ತಮುತ್ತಲಿನವರು ಓಡಿಬಂದಾಗ ಅವರೂ ಥಳಿಸಲ್ಪಟ್ಟರು."

"ಈಗ ನಾಗಿ ಪೂಜಾರ್ತಿ, ಅಪ್ಪು ಪೂಜಾರ್ತಿ ಮತ್ತು ದೇಜು ಪೂಜಾರಿಯ ಸ್ಥಿತಿ ಚಿಂತಾಜನಕವಾಗಿದ್ದು ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ."

"ಹಲ್ಲೆ ಮಾಡಿದವರೆಂದು ಹೇಳಲಾದ ಅನಿಲ್‌ಕುಮಾರ್, ರವಿಚಂದ್ರ, ಶೇಖರ ಎಮರ್ಾಳು, ದಾಮೋದರ ಸುವರ್ಣಾ ಎಮರ್ಾಳು ಸುಕುಮಾರ್ ಶೆಟ್ಟಿ, ತೀರ್ಥ ಸುವರ್ಣಾ ಮತ್ತು ಶೇಖರ ಶೆಟ್ಟಿ ಎಂಬುವವರ ಮೇಲೆ ಪೋಲಿಸರು ಕೇಸ್ ದಾಖಲೆ ಮಾಡಿಕೊಂಡಿದ್ದು ಇನ್ನೂ ಯಾರನ್ನೂ ಬಂಧಿಸಿಲ್ಲ."

ಮಹಾರಾಷ್ಟ್ರ ಗಲಭೆಗಳ ಹಿಂದಿನ ಕೈವಾಡ ಯಾರದು ?

(ಒಂದನೇ ಪುಟದಿಂದ)

ಫೆಬ್ರವರಿ 19 ರಂದು ಲೋಕ ಸಭೆಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ಸಿ.ಪಿ.ಐ. (ಎಂ) ಸಂಸತ್ ಸದಸ್ಯ ಕಾಂ| ಇ ಬಾಲಾನಂದನ್ ಮಂಡಿಸುತ್ತಾ, ಗಲಭೆಯ ಹಿನ್ನೆಲೆಯನ್ನು ವಿಶದವಾಗಿ ಮಂಡಿಸಿದರು. ತಮಿಳುನಾಡಿನ ಮತಾಂತರ ಘಟನೆಯ ನಂತರ ಹಿಂದೂ ಕೋಮುವಾದಿಗಳು 'ಹಿಂದೂ ಧರ್ಮ ಗಂಡಾಂತರದಲ್ಲಿದೆ ಎಂಬ ಪುಕಾರನ್ನೆಬ್ಬಿಸಿದ್ದಾರೆ. ದೆಹಲಿ, ಪಂಜಾಬ್ ಮತ್ತಿತರ ಕಡೆ ಹಿಂದೂ ಸಮ್ಮೇಳನಗಳು ನಡೆದಿದ್ದು ಕಾಂಗ್ರೆ ಮುಂದಾಳುಗಳು ಸಕ್ರೀಯ ಪಾತ್ರ ವಹಿಸಿದ್ದನ್ನು ಕಾಂ|| ಬಾಲಾನಂದನ್ ಉದಹರಿಸಿದರು. ಪೂನಾ ಮತ್ತಿತರ ಪ್ರದೇಶಗಳಲ್ಲಿ ನಡೆದ ಗಲಭೆಗಳೂ ಈ ಕೋಮುವಾದಿಗಳ ಷಡ್ಯಂತ್ರದ ಭಾಗ ಮಾತ್ರ ಎಂದು ಕಾಂ| ಬಾಲಾನಂದನ್ ತಿಳಿಸಿದರು. ಈ ಪ್ರಕರಣದಲ್ಲಿ ಸರಕಾರಿ ಆಡಳಿತ ಯಂತ್ರ ಮತೀಯ ವಾದಿಗಳ ಕೈಗೊಂಬೆಯಾಗಿತ್ತು ಎಂದು ಕಾಂ| ಬಾಲಾನಂದನ್ ಆಪಾದಿಸಿದರು.

ಗಮನ ಸೆಳೆಯುವ ಸೂಚನೆ ಕುರಿತು ಮಾತನಾಡಿದ ಇನ್ನೊಬ್ಬ ಸಿ. ಪಿ. ಐ. (ಎಂ) ಸದಸ್ಯ ಕಾಂ| ಎಂ. ಎಂ. ಲಾರೆನ್ಸ್ ಮಾತನಾಡುತ್ತಾ ಆಳುವ ಪಕ್ಷದ ಸದಸ್ಯರು ಮತೀಯವಾದಿಗಳೊಂದಿಗೆ ಕೈ ಮಿಲಾಯಿಸಿದ್ದಾರೆ ಎಂದು ದೂರಿದರು. ಮತೀಯ ಗಲಭೆ ಉದ್ರೇಕಿಸುವಲ್ಲಿ ಆಳುವ ಪಕ್ಷದ ಸದಸ್ಯರು ಮುಂದಾಗಿದ್ದಾರೆಂದು ಕಾಂ| ಲಾರೆನ್ಸ್ ನುಡಿದರು..

ಫೆಬ್ರುವರಿ 23 ರಂದು ರಾಜ್ಯ ಸಭೆಯಲ್ಲಿ ಕಾಂ| ಹರಿ ಕಿಷನ್ ಸಿಂಗ್ ಸುರಜೀತ್‌ರು ಈ ವಿಷಯ ಪ್ರಸ್ತಾಪಿಸುತ್ತಾ ಸ್ವಾತಂತ್ರ್ಯನಂತರದ 34 ವರ್ಷಗಳ ನಂತರವೂ ಸರ್ಕಾರ ಅಲ್ಪ ಸಂಖ್ಯಾತರನ್ನು ರಕ್ಷಿಸುವಲ್ಲಿ ಸಂಪೂರ್ಣ ವಿಫಲಗೊಂಡಿದೆ ಎಂದರು. ಪ್ರಸಕ್ತ ಗಲಭೆಯ ಹಿನ್ನೆಲೆಯನ್ನು ಎಳೆ ಎಳೆಯಾಗಿ ವಿವರಿಸಿದ ಕಾಂ| ಸುರ್‌ಜೀತರು ಗಲಭೆಗಳ ಸಂದರ್ಭದಲ್ಲಿ ಆಡಳಿತ ಯಂತ್ರ ಗಲಭೆಕೋರರನ್ನು ಮಟ್ಟಹಾಕಿ ಶಾಂತಿ ಕಾಪಾಡಬೇಕು.

ಗಲಭೆ ಪೂರ್ವ ಪರಿಸ್ಥಿತಿಯ ಗಂಭೀರತೆಯ ಕುರಿತು ಗೃಹ ಮಂತ್ರಿಗಳಿಗೆ ಕೆಲವು ಸಂಸತ್ ಸದಸ್ಯರು ಪತ್ರ ಬರೆದಿದ್ದನ್ನು ಪ್ರಸ್ತಾಪಿಸಿದ ಕಾಂ| ಸುರಜೀತ್‌ರು, ಎಚ್ಚರಿಕೆಯನ್ನು ಆಡಳಿತ ಯಂತ್ರ ಸಂಪೂರ್ಣ ನಿರ್ಲಕ್ಷಿಸಿದ್ದರಿಂದಲೇ ಈ ಅನಾಹುತ ನಡೆದಿದೆ ಎಂದು ಆಪಾದಿಸಿದರು. ಪೂನಾದಲ್ಲಿ ಅಲ್ಪ ಸಂಖ್ಯಾತರ ಮೇಲೆ ಹಲ್ಲೆ ಆಗುತ್ತಿದ್ದಾಗ ಮೂಕ ಪ್ರೇಕ್ಷಕರಂತೆ ವರ್ತಿಸಿದ ಪೋಲೀಸರ ಪಾತ್ರವನ್ನು ಕಾಂ| ಸುರಜೀತ್ ಕಟುವಾಗಿ ಖಂಡಿಸಿದರು. ಗಲಭೆಗ್ರಸ್ತ ಪ್ರದೇಶಗಳಲ್ಲಿ ಮಸೀದಿಗಳಲ್ಲಿ ಧ್ವನಿವರ್ಧಕ ಉಪಯೋಗಿಸುವ ಅನುಮತಿ ಹಿಂತೆಗೆದುಕೊಂಡಿದ್ದನ್ನು ಪ್ರಸ್ತಾಪಿಸಿದ ಕಾಂ| ಸುರಜೀತ್, ಈ ಕ್ರಮ ಹಿಂದೂ ಮತೀಯ ವಾದಿಗಳಿಗೆ ಕುಮ್ಮಕ್ಕು ಕೊಟ್ಟಂತಾಗಿದೆ ಎಂದರು. ಮೆರವಣಿಗೆಯ ಮುಂಭಾಗದಲ್ಲಿದ್ದ ಆನೆಯು ಪೂನಾ ನಗರ ಸಭೆಗೆ ಸೇರಿದ್ದನ್ನು ಪ್ರಸ್ತಾಪಿಸಿದ ಕಾಂ| ಸುರಜೀತ್‌ರು ಆಡಳಿತ ಯಂತ್ರ ಮತೀಯ ವಾದಿಗಳೊಂದಿಗೆ ಸಹಕರಿಸಿದ್ದಕ್ಕೆ ನಿದರ್ಶನ ಎಂದರು.

ಸರ್ಕಾರದ ನಿಯಂತ್ರಣದಲ್ಲಿರುವ ಸಮೂಹ ಮಾಧ್ಯಮಗಳು ಮತೀಯ ಭಾವನೆಗಳನ್ನು ಕೆರಳಿಸುವಲ್ಲಿ ಸಹಕಾರಿಯಾಗುತ್ತಿವೆ ಎಂದರು. ●

Statement about ownership and other particulars about Newspaper AIKYARANGA, to be published in the first issue every year after the last day of February

FORM IV

1.	Title of Newspaper	AIKYARANGA
2.	Registration Number of the Newspaper.	MAG (2) PRB DECR 319/78-79.
3.	Language/Languages in which it is published.	Kannada
4.	Periodicity of its publication & the day/days/ dates on which it is published	Weekly
5	Retail price of the Newspaper-	60 paise
6.	Publisher's Name Nationality Address of the owners,	P. Ramachandra Rao Indian. L-56, K. V. Temple Street, Sultanpet, Bangalore-560 053
7.	Printer's Name Nationality Address.	P. Ramachandra Rao, Indian L 56, K. V. Temple Street, Sultanpet, Bangalore-560 053,
8.	Editor's Name Nationality Address,	M. K. Bhat, Indian. L-56 K. V. Temple Street, Sultanpet, Bangalore-560 053.
9.	True & precise account of the premises where the printing in conducted.	Ravee Traders No. 8/1, J M. Lane, Balepet Cross, Bangalore-560 053.
10.	Owner's Names	Karnataka State Committee, Communist Party of India (Marxist) L, 56, K. V. Temple Street, Sultanpet, Bangalore-560 053
11	Place of Publication	Bangalore-560 053

I, P. Ramachandra Rao, hereby declare that the particulars given above are true to the best of my knowledge and belief.

Bangalore,
7-3-1982

P. RAMACHANDRA RAO,
Signature of Publisher.

ರೈತ ಸಮ್ಮೇಳನ

(1ನೇ ಪುಟದಿಂದ)

ದನ್ನು ಸಮ್ಮೇಳನವು ಬಲವಾಗಿ ಖಂಡಿಸಿತು. ಭೂ ಸುಧಾರಣಾ ಕಾನೂನಿನ ಪ್ರಕಾರ ರೈತರಿಂದ ಹಳೆಯ ಗೇಣಿಯನ್ನು ವಸೂಲಿ ಮಾಡುವುದು ತೀರಾ ಅನ್ಯಾಯವೆಂದು ಪರಿಗಣಿಸಿದ ಸಮ್ಮೇಳನವು ಈ ಕಾರ್ಯಾಚರಣೆಯನ್ನು ತತ್‌ಕ್ಷಣ ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

ಮೂರ್ತೆದಾರರ ಸಮಸ್ಯೆಗಳನ್ನು ಚರ್ಚಿಸಿದ ಸಮ್ಮೇಳನವು ಶೇಂದಿಯ ಮಾರಾಟ ಬೆಲೆಯ ಅರ್ಧದಷ್ಟನ್ನು ಮೂರ್ತೆದಾರರಿಗೆ ಕೊಡಬೇಕೆಂದೂ, ಮರತೆರಿಗೆ ರದ್ದುಮಾಡಬೇಕೆಂದೂ, ಬೆಲ್ಲ ತಯಾರಿಸಲು ಉಚಿತ ಲೈಸೆನ್ಸ್ ನೀಡಬೇಕೆಂದೂ ಸರ್ಕಾರವನ್ನು ಒತ್ತಾಯಿಸಲಾಯಿತು.

ವಸತಿ ಸಮಸ್ಯೆ ಗಂಭೀರವಾಗಿರುವ ಕಾಲದಲ್ಲಿ ಬಾಡಿಗೆದಾರರಿಗೆ ಯೋಗ್ಯ ರಕ್ಷಣೆ ಒದಗಿಸುವ ಸುಗ್ರೀವಾಜ್ಞೆ ಕೂಡಲೇ ದೊರಕಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು.

ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಆ ಭೂಮಿಯ ಖಾಯಂ ಮಾಲೀಕತ್ವದ ಪಟ್ಟಾ ನೀಡಬೇಕು, ಕೃಷಿ ಕೂಲಿಕಾರರಿಗೆ ಜೀವನ ನಿರ್ವಹಣೆಗೆ ಬೇಕಾದ ಕನಿಷ್ಠ ಕೂಲಿ ನಿಗದಿ ಮಾಡಿ ಜ್ಯಾರಿಗೊಳಿಸಬೇಕು ಮತ್ತು ಅವರಿಗೆ ಕೆಲಸದ ಭದ್ರತೆ ಕೊಡಬೇಕು ; ರೈತರ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನಿಗದಿ ಮಾಡಬೇಕು ; ಕೃಷಿ ಸಲಕರಣೆಗಳು, ರಸಾಯನಿಕ ಗೊಬ್ಬರ ಇತ್ಯಾದಿಗಳನ್ನು ರೈತರಿಗೆ ಕಡಿಮೆ ಬೆಲೆಯಲ್ಲಿ ಒದಗಿಸಬೇಕು ಎಂಬಿತ್ಯಾದಿ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಬಂಟ್ವಾಳ್ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ| ಬಿ. ರುಕ್ಮಯ್ಯ ಪೂಜಾರಿಯವರ ಮೇಲೆ ನಡೆದ ಪೋಲೀಸ್ ಚಿತ್ರ ಹಿಂಸೆಯನ್ನು ಖಂಡಿಸುವ ನಿರ್ಣಯ ಅಂಗೀಕರಿಸಲಾಯಿತು.

45 ಸದಸ್ಯರನ್ನೊಳಗೊಂಡ ನೂತನ ಜಿಲ್ಲಾ ಸಮಿತಿಯನ್ನು ಚುನಾಯಿಸಲಾಯಿತು. ಸಮಿತಿಗೆ ಅಧ್ಯಕ್ಷರಾಗಿ ಕಾಂ| ಅಬ್ರಹಾಂ ಕರ್ಕಡ, ಉಪಾಧ್ಯಕ್ಷರುಗಳಾಗಿ ಕಾಂ| ಕೆ ಸೂರ್ಯನಾರಾಯಣ ಭಟ್, ಕೆ. ವಿ. ರಾವ್ ಮತ್ತು ದಾಸ್ ಭಂಡಾರಿ, ಕಾರ್ಯದರ್ಶಿಯಾಗಿ ಕಾಂ| ಯು. ಜನಾರ್ಧನ್ ನಾಯಕ್, ಸಹಕಾರ್ಯದರ್ಶಿಗಳಾಗಿ ಕಾಂ| ಬಿ. ವಿಷ್ಣುಮೂರ್ತಿ, ಕೆ. ಮೋನಪ್ಪಗೌಡ ಮತ್ತು ಕಾಂ| ಟಿ. ಎಸ್. ಕೋಟ್ಯಾನ್ ಖಜಾಂಚಿಯಾಗಿಕಾಂ| ಡೇವಿಡ್‌ಕರ್ಕಡ ಇವರುಗಳು ಚುನಾಯಿತರಾಗಿದ್ದಾರೆ.

ಕಾಂ| ಪಿ. ರಾಮಚಂದ್ರರಾವ್ ಅವರು ಸಮಾರೋಪ ಭಾಷಣ ಮಾಡಿದರು. ಕೊನೆಯಲ್ಲಿ ಕಾಂ| ಟಿ. ಎಸ್. ಕೋಟ್ಯಾನ್ ವಂದನಾರ್ಪಣೆ ಮಾಡಿದರು.

ಅಧ್ಯಕ್ಷ ಮಂಡಳಿಯ ಪರವಾಗಿ ಕಾಂ| ಕೆ. ಸೂರ್ಯನಾರಾಯಣಭಟ್ ಮಾತನಾಡಿ ಕಲಾಪ ನಿರ್ವಹಿಸಲು ಸಹಕರಿಸಿದ್ದಕ್ಕೆ ಪ್ರತಿನಿಧಿಗಳಿಗೆ ಕೃತಜ್ಞತೆ ಸಲ್ಲಿಸಿದರು,

(ಸಮ್ಮೇಳನದ ಅಂಗವಾಗಿ ಫೆ. 28ರ ಸಂಜೆ ಬಹಿರಂಗ ಸಭೆ ನಡೆಯಿತು. ಕಾಂ| ರಾಮಣ್ಣ ರೈ (ಎಂ.ಪಿ.)ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಬಹಿರಂಗ ಸಭೆಯ ಪೂರ್ತಿ ವಿವರ ಮುಂದಿನ ವಾರ). ●

—

— ಪರಿಸರ —

● ರಾಜೀವ್ ಗಾಂಧಿಯವರನ್ನು ರಾಜಕೀಯ ಗಗನಕ್ಕೆ ಉಡಾಯಿಸಿದ ಕಾಂಗ್ರೆ ಸಾಹಸದ ಫಲವಾಗಿ ರಾಜ್ಯದ ಬೊಕ್ಕಸ ಸೊರಗಿದೆ... ಈ ವೇಳಕ್ಕೆ ನೀಡಿದ ಗಮನಕ್ಕೆ "ಬಾಡಿಗೆ" ಮಾತ್ರ ಇನ್ನೂ ಸಂದಾಯವಾಗಿಲ್ಲವೆಂಬುದಕ್ಕೆ ವಿದ್ಯುತ್ ಮಂಡಳಿಯೊಂದು ಉದಾಹರಣೆ... ಕಾಂಗ್ರೆ ತೆರಬೇಕಾಗಿದ್ದು ಎರಡು ಲಕ್ಷ ರೂ. ಮತ್ತು ವಿದ್ಯುತ್ ಬಳಕೆಗಾಗಿ ಇನ್ನೂ 50 ಸಾವಿರ ರೂ ಇದನ್ನು ಮುಂಗಡವಾಗಿ ಪಾವತಿ ಮಾಡಬೇಕೆಂಬುದು ಮಂಡಳಿಯ ಪ್ರಮುಖ ನಿಯಮ ಗಳಲ್ಲೊಂದು...ಎಕ್ಸ್‌ಕ್ಯೂಟಿವ್ ಇಂಜನೀಯರ್ ಪ್ರದೇಶ ಯುವಕಾಂಗ್ರೆಸ್ ಅಧ್ಯಕ್ಷರಿಗೆ "ದುಡ್ಡು ಕೊಡಿ" ಎಂದು ಪತ್ರ ಬರೆದರು. ಈವರೆಗೆ ಆ ಕಡೆಯಿಂದ ಯಾವ ಸ್ವರೂಪದ ಉತ್ತರ ಇಲ್ಲ.

— ಪ್ರಜಾವಾಣಿ ಫೆ.

● ಒಂದು ಆಸ್ತಿ ವಿವಾದದ ಸಂಬಂಧದಲ್ಲಿ ಒಬ್ಬ ವ್ಯಾಪಾರಿಯನ್ನು ಗುಂಡಿಟ್ಟು ಕೊಲ್ಲುವ ಬೆದರಿಕೆ ಹಾಕಿದ್ದಕ್ಕೆ ಒಬ್ಬ ಯುವಕಾಂಗ್ರೆಸ್ ನಾಯಕ ಮತ್ತು ಆತನ ಡ್ರೈವರ್‌ನನ್ನು ನವದೆಹಲಿ ಪೋಲಿಸರು ಬಂಧಿಸಿದ್ದಾರೆ. ಪೂರ್ವ ದಿಲ್ಲಿ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷ ಜಗದೀಶ ಸೆಹೆಗಲ್ ಆ ವ್ಯಕ್ತಿ ಎಂದು ಪೋಲಿಸ್ ಮೂಲಗಳು ಗುರುತಿಸಿವೆ.

— ಯು.ಎನ್.ಐ. ಫೆ. 23

● ಶಿಕ್ಷಕರು ಉದ್ದೇಶಿಸಿರುವ ಮುಷ್ಕರದಿಂದ ಹೈಯರ್ ಸೆಕೆಂಡರಿ ಸರ್ಟಿಫಿಕೇಟ್ ಪರೀಕ್ಷೆ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು. ಅಲ್ಲಿಗೂ ಅನಾನುಕೂಲ ಇದ್ದರೆ ಅವರನ್ನು ಪರೀಕ್ಷೆಗೆ ಕುಳಿತುಕೊಳ್ಳದೆಯೇ ಉತ್ತೀರ್ಣಗೊಳಿಸುವ ವಿಚಾರವನ್ನು ಸರಕಾರ ಆಲೋಚಿಸುತ್ತದೆ.

● ಬಾಬಾ ಸಾಹೇಬ್ ಭೋಸಲೆ (ಮಹಾರಾಷ್ಟ್ರದ ಮುಖ್ಯಮಂತ್ರಿ) ಹಿಂದೆ ಈ ಬಗ್ಗೆ ಕೊಟ್ಟ ಭರವಸೆಗಳು, ಸುಳ್ಳಾಗಿರುವ ಹಿನ್ನೆಲೆಯಲ್ಲಿ ರೈಲ್ವೇ ಉನ್ನತಾಧಿಕಾರಿಗಳು ಈ ರೈಲ್ವೇ ಬಜೆಟ್‌ನಲ್ಲಿ ಪರಿಷ್ಕರಣಕ್ಕೆ ಒಳಪಡಿಸಿರುವ ಅವಶ್ಯಕ ವಸ್ತುಗಳ ಸಾಗಾಣಿಕ ದರಗಳು ಜನಸಾಮಾನ್ಯರ ಮೇಲೆ, ಬೆಲೆಗಳ ಮೇಲೆ ಯಾವ ಪರಿಣಾಮ ಬೀರಬಹುದೆಂಬ ಬಗ್ಗೆ ಯಾವುದೇ ರೀತಿಯ ಟೀಕೆ-ಟಿಪ್ಪಣಿ ಮಾಡಲು ಸಿದ್ಧರಿರಲಿಲ್ಲ.

— ಇಂಡಿಯನ್ ಎಕ್ಸ್‌ಪ್ರೆಸ್ ಫೆ. 23

● ತಮಿಳುನಾಡಿನ ಕೃಷಿ ಕಾರ್ಮಿಕರ ನಾಗರಿಕ ಮತ್ತು ಮಾನವೀಯ ಹಕ್ಕುಗಳ ಬಗ್ಗೆ ನಡೆಸಿರುವ ಒಂದು ಅಧ್ಯಯನದಲ್ಲಿ ಉದ್ಧರಿಸಿರುವ ಕೇಂದ್ರ ಗೃಹ ಮಂತ್ರಾಲಯದ ಸಮೀಕ್ಷೆ ಪ್ರಕಾರ ಈ ರಾಜ್ಯದಲ್ಲಿ ಗ್ರಾಮೀಣ ಅಸಮಾನತೆ ಬಹಳ ವಿಪರೀತ ಪ್ರಮಾಣದಲ್ಲಿ ಇದೆ. ಈ ಸಮೀಕ್ಷೆಯ ಪ್ರಕಾರ "ಈ ರಾಜ್ಯದಲ್ಲಿ ಜೀತದ ದುಡಿಮೆಯ ಪದ್ಧತಿ ವ್ಯಾಪಕವಾಗಿ ಬಳಕೆಯಲ್ಲಿದೆ ಮತ್ತು ಸಾಲಗಾರ ಕೃಷಿ ಕಾರ್ಮಿಕರು ತಮ್ಮ ಹದಿಹರೆಯದ ಮಕ್ಕಳನ್ನು ಅಡವು ಸಹ ಇಡುವ ಪ್ರಸಂಗಗಳು ಬೆಳಕಿಗೆ ಬಂದಿವೆ.

ಯು ಎನ್. ಐ ಫೆ. 22

● ಭಾರತೀಯ ಸಂವಿಧಾನದ 22ನೇ ಅನುಬಂಧ ಮುಂಜಾಗರೂಕತಾ ಸ್ಥಾನಬದ್ಧತೆಗೆ ಅನುವು ಮಾಡಿ ಕೊಡುತ್ತದೆ. ಮತ್ತು ಕೋರ್ಟುಗಳು ಇದನ್ನು ಅನುಸರಿಸಬೇಕಾಗಿ ಬಂದಿದೆ.

ಪ್ರಸಿದ್ಧ ನ್ಯಾಯವಾದಿ ಎ. ಜಿ. ನೂರಾನಿ NSA ಸಂವಿಧಾನ ಬದ್ಧತೆಯ ಸುಪ್ರೀಂಕೋರ್ಟಿನ ತೀರ್ಪು ಬಗ್ಗೆ 'ಡೆಬೋನೇರ್'ನಲ್ಲಿ.

● ಡಾ|| ಸಾಮಂತ (ಕಾರ್ಮಿಕರಲ್ಲಿ) ಅಂಧ ಆರ್ಥಿಕವಾದವನ್ನು ತಾತ್ವಿಕತೆಯ ಮಟ್ಟಕ್ಕೆ ಏರಿಸುವಲ್ಲಿ, ದೇಶದಲ್ಲಿ ಬೇರೆ ಯಾರಿಂದಲೂ ಆಗದ ಕೆಲಸ ಮಾಡಿದ್ದಾರೆ.

ಜಾರ್ಜ್ ಫರ್ನಾಂಡಿಸ್ ಮುಂಬಯಿ ಕಾರ್ಮಿಕ ರಂಗದಲ್ಲಿ ಡಾ|| ಸಾಮಂತ ಪ್ರತಿಕ್ರಿಯೆ ಕುರಿತು.

● ತನ್ನ ಅಧ್ಯಕ್ಷರನ್ನು ಸಾಬೂನು ಪುಡಿಯಂತೆ ಮಾರಾಟ ಮಾಡುವ ದೇಶಕ್ಕೆ 90 ನಿಮಿಷದ ಕಮರ್ಷಿಯಲ್ ಚಿತ್ರ ತಯಾರಿಸಲು ಪೋಲೆಂಡಿನ ವಿದ್ಯಮಾನಗಳು ನೆರವಾದುದರಲ್ಲಿ ಏನೂ ಆಶ್ಚರ್ಯವಿಲ್ಲ.

— 'ಡೈಲಿ ಮೇಲ್'ನಲ್ಲಿ ರೀಗನ್ ಆಡಳಿತ ಪೋಲೆಂಡಿನ ವಿದ್ಯಮಾನಗಳ ಬಗ್ಗೆ ತಯಾರಿಸಿದ ವಾರ್ತಾ ಚಿತ್ರ ಬಗ್ಗೆ ಸಮೀಕ್ಷೆ.

ಕಾಂ| ಕೃಷ್ಣನ್ ಪುನರಾಯ್ಕೆ

—

ಗುಲ್ಬರ್ಗಾದಲ್ಲಿ ಫೆಬ್ರವರಿ 25 ರಿಂದ 28ರ ತನಕ ನಡೆದ ಸಿ.ಪಿ.ಐ ನ 12ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಕಾಂ| ಎಂ. ಎಸ್. ಕೃಷ್ಣನ್ ಪುನರಾಯ್ಕೆಯಾಗಿದ್ದಾರೆ.

ಕಾಂ| ಕೃಷ್ಣನ್‌ರನ್ನು ಐಕ್ಯರಂಗ ಅಭಿನಂದಿಸುತ್ತದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee. L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT,